Reg.No. M. 1550.
"KODAGU" MERCARA, (Coorg).

- 24 -

ಕೊಡಗು

ಸಂಪಾದಕರು:–ಶ್ರೀ ಪಿ. ಐ. ಬೆಳ್ಯಪ್ಪ, ವಾರ್ಷಿಕ ಚಂದಾ: ರೂ: ೩–೮–೦.

ಸಂಪುಟ ೨೮ | ತಾರೀಕು ೧೦—೧೧—೧೯೪೪ನೇ ಶುಕ್ರವಾರ. | ಸಂಚಿಕೆ ೨೪

ಕಾಂಗ್ರೆಸಿಗರ ಸಮ್ಮೇಳನ.

ಕಳೆದ ತಾ. 28–29 ಶನಿವಾರ ಭಾನು ರವಿವಾರ ಮುಂಬಯಿಯಲ್ಲಿ ಮುಂಬಯಿ, ಗುಜರಾಥ, ಮಹಾರಾಷ್ಟ್ರ ಮತ್ತು ಕರ್ನಾಟಕ ಪ್ರಾಂತಗಳ ಪ್ರಮುಖ ಕಾಂಗ್ರೆಸ್ಸಿಗರ ಅನೌಪಚಾರಿಕ ಸಭೆಯು ಕೇಂದ್ರ ಅಸೆಂಬ್ಲಿ ಮೆಂಬರರಾದ ಶ್ರೀ. ಎನ್. ವಿ. ಗಾಡಗೀಳರ ಅಧ್ಯಕ್ಷತೆಯಲ್ಲಿ ಜರುಗಿತು. ಕಾಂಗ್ರೆಸಿಗರು ಅನುಸರಿಸತಕ್ಕ ಕಾರ್ಯಕ್ರಮಗಳ ಬಗ್ಗೆ ಹಾಗೂ ದೇಶದ ಸಾಮಾನ್ಯ ಪರಿಸ್ಥಿತಿ ಕುರಿತು ಚರ್ಚೆ ನಡೆಯಿತು.

ಮುಂದಿನ ಧೋರಣೆ ಹಾಗು ಕಾರ್ಯಕ್ರಮಗಳನ್ನು ನಿರ್ದೇಶಿಸಿದ ಹಾಗೂ ಮಹಾತ್ಮಾ ಗಾಂಧಿಯವರ ನಾಯಕತ್ವದಲ್ಲಿ ಚುಮುಂಡ ವಿಶ್ವಾಸ ವ್ಯಕ್ತಪಡಿಸಿದ ಈ ಪೈಕಿಗಳು 4 ಪ್ರಾಂತಗಳ ಕಾಂಗ್ರೆಸಿಗರ ಪರಿಷತ್ತಿನಲ್ಲಿ ಒಮ್ಮತದಿಂದ ಪಾಸಾದವು. ಆಲ್ಲದೆ 1942 ನೇ ಆಗಸ್ಟ್ ತಿಂಗಳಲ್ಲಿ ಎ. ಐ. ಸಿ ಸಿಯಲ್ಲಿ ಪಾಸಾದ ಠರಾವು ಇನ್ನೂ ಊರ್ಜಿತದಲ್ಲಿರುವುದೆಂದೂ ಮಹಾತ್ಮರು ವಿವೇಚಿಸಿದಂತೆ ಕಾಂಗ್ರೆಸ್ ಧೋರಣೆಯು ಆ ಠರಾವಿನಂತೆ ಇರುವುದೆಂದೂ 4 ಪ್ರಾಂತಗಳ ಕಾಂಗ್ರೆಸಿಗರ ಪರಿಷತ್ತಿನಲ್ಲಿ ನಿರ್ಣಯಿಸಲಾಯಿತು.

ಯಾವತ್ತೂ ಕಾಂಗ್ರೆಸಿಗರು ಕೂಡಲೆ ಒಳ್ಳೆ ಕಳಕಳಿಯಿಂದ ಕಾಂಗ್ರೆಸ್ ಸದಸ್ಯತ್ವವನ್ನು ಹೆಚ್ಚು ಪ್ರಮಾಣದಲ್ಲಿ ಭದ್ರಮಾಡಿಕೊಳ್ಳಬೇಕೆಂದು ಅಧಿಕ ಪ್ರಮಾಣದಲ್ಲಿ ಸಭಾಸದರನ್ನು ಜೆಳೆಯಿಸಿಕೊಳ್ಳುವದಕ್ಕೆ ಕಾಲಾವಧಿಯನ್ನು ನಿರ್ದಿಷ್ಟಗೊಳಿಸಬೇಕೆಂದೂ ಒಂದು ಠರಾವಿನ ಮೂಲಕ ಗೊತ್ತುಮಾಡಲಾಯಿತು. ಆಲ್ಲದೆ ಸರಕಾರಪ್ರ ತಳೆದ ಧೋರಣೆಯಿಂದ ಕಾಂಗ್ರೆಸ್ಸಿಗರು ಈ ರೀತಿ ಕೆಲಸ ನಾಗಿಸಿ ತಮ್ಮ ಕರ್ತವ್ಯ ಪರಿಪಾಲಿಸಿ ಕಾಂಗ್ರೆಸ್ಸು ಜನಪ್ರಿಯ ಮಾಡುವುದೆಂಬುದನ್ನು ಸರಕಾರಕ್ಕೆ ಸ್ಪಷ್ಟ ರೂಪುಗೊಳಿಸಿ ವ್ಯಕ್ತಪಡಿಸುವದು ಅತ್ಯವಶ್ಯವಿದೆಯೆಂದೂ ಆ ಠರಾವಿನಲ್ಲಿ ಬೇಳಲಾಗಿದೆ.

ಇನ್ನೊಂದು ಠರಾವಿನ ಮೂಲಕ ಬಿಳ್ಳೇ ಶಿಸ್ತಿನ ಹಾಗೂ ಕರ್ತವ್ಯದಕ್ಷ ಸ್ವಯಂಸೇವಕ ಪಡೆಯನ್ನು ನಿರ್ಮಿಸುವದು ಅತ್ಯವಶ್ಯವಿದೆ. ಆದ್ದರಿಂದ ಪ್ರತಿಯೊಂದು ಕಾಂಗ್ರೆಸ್ ಪ್ರಾಂತದಲ್ಲಿಯೂ ಕಾಂಗ್ರೆಸ್ ಚಟುವಟಿಕೆಯನ್ನು ಪ್ರಖರಗೊಳಿಸುವದಕ್ಕೆ ಹಾಗೂ ದೇಶ ಮತ್ತು ಕಾಂಗ್ರೆಸದ ಸೇವೆಗೆ ಅನುಕೂಲವಾಗುವ ತರುಣಪೀಳಿಗೆಗೆ ತಕ್ಕ ತರಬೇತಿ ಕೊಡುವ ಹೊಣೆಯು ಕಾಂಗ್ರೆಸಿಗರ ಮೇಲಿದೆ. ಆದ ಕಾರಣ ಆವರಿಗೆ ದೈಹಿಕ ಹಾಗೂ ಬೌದ್ಧಿಕ ತರಬೇತಿ ಕೊಡಬೇಕು. ಸಮಗ್ರ ಹಿಂದುಸ್ಥಾನದಲ್ಲಿ ಸ್ವಯಂಸೇವಕರ ಮಟ್ಟಿಗೆ ಏಕ ಧೋರಣೆ ವಹಿಸಬೇಕು. ಅಂದರೆ ಯಶಸ್ವಿಯಾಗಿ ಕಾರ್ಯಕ್ರಮ ಸಾಗಿಸಲು ಅನುಕೂಲವಾಗುವದು. ಸ್ವಯಂಸೇವಕರ ಮಟ್ಟಿಗೆ ಕೆಲವು ಕಾರ್ಯಕ್ರಮಗಳನ್ನಿಟ್ಟು ಅದರಂತೆ ಯಶಸ್ವಿ ಕೆಲಸ ಸಾಗಿಸಬೇಕೆಂದೂ ಗೊತ್ತುಮಾಡಲಾಯಿತು.

ಆಲ್ಲದೆ ಸರಕಾರವು ತಳೆದ ಆಹಾರ ಧೋರಣೆಯನ್ನು ಕಟುವಾಗಿ ಟೀಕಿಸಿ ಅಧಿಕಾರಿಗಳಿಂದ ಜನತೆಗೆ ಆಗುತ್ತಿರುವ ಅನ್ಯಾಯ ಹಾಗೂ ಲಂಚಗುಳಿತನದ ಹಾವಳಿ ಮುಂತಾದವುಗಳನ್ನು ಕುರಿತು ಇನ್ನೊಂದು ಠರಾವಿನಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದ್ದು ಸರಕಾರದ ಕೊಳ್ಳುವ ಹಾಗೂ ಪ್ರಸರಣದ ರೀತಿ ನೀತಿಗಳನ್ನು ಖಂಡಿಸಲಾಗಿದೆ. ಆಲ್ಲದೆ ಕಾಂಗ್ರೆಸಿಗರು ಹಾಗೂ ಅವರೊಡನೆ ಸಹಕರಿಸುವವರು ಒಂದಾಗಿ ಪ್ರತಿಯೊಂದು ತಾಲೂಕದಲ್ಲಿ ಸಮಿತಿಗಳನ್ನು ರಚಿಸಿ ಜನತೆಗೆ ಆಗುವ ಅನ್ಯಾಯದಿಂದ ಪಾರಾಗುವಂತೆ ಮಾಡಬೇಕು. ಈಗ ಗಲೆ ಅಧಿಕಾರೇತರ ಸಮಿತಿಯವರು ಮಾಡಿದ ಕೆಲಸಗಳು ಶ್ಲಾಘನೀಯ ವೆಂಬುದು ಗೊತ್ತಾಯಿತು, ಆಲ್ಲದೆ ಸರಕಾರಿ ಆಹಾರ ಸಮಿತಿಗಳೊಡನೆ ಕಾಂಗ್ರೆಸಿಗರಾರೂ ಸಹಕರಿಸಬಾರದೆಂದೂ ಗೊತ್ತಾಯಿತು.

ಮತೆರ್ತೊಂದು ಠರಾವಿನಲ್ಲಿ ರಾಯಭಕ್ತಿ ಹಾಗೂ ಕಮ್ಯುನಿಸ್ಟ ಪಕ್ಷದವರ ಧೋರಣೆಯನ್ನು ಟೀಕಿಸಿ ಇಂಥವರು ಕಾಂಗ್ರೆಸ್ಸಿನಲ್ಲಿ ಸೇರಿಕೊಂಡಿದ್ದು ಅಧಿಕಾರದ ಸೂತ್ರ ಪಹಿಸಬಾರದೆಂದೂ ಇದರಿಂದ ಕಾಂಗ್ರೆಸದ ಧೋರಣೆಗೆ ಧಕ್ಕೆಯಾಗುವದು. ಆದ ಕಾರಣ ಇಂಥವರನ್ನು ಕಾಂಗ್ರೆಸದಿಂದ ಹೊರಗಿಡಬೇಕಲ್ಲದೆ ಕಾಂಗ್ರೆಸಿಗರು ಇಂಥ ಪಕ್ಷಗಳೊಡನೆ ರಾಜಕೀಯ ಸಂಬಂಧವನ್ನಿಟ್ಟುಕೊಳ್ಳಬಾರದೆಂದು ನಿರ್ಣಯಿಸಲಾಗಿದೆ.

ಇನ್ನೊಂದು ಠರಾವಿನಲ್ಲಿ ಕಾಂಗ್ರೆಸ್ ಸಂಸ್ಥೆ ಹಾಗೂ ಕಾಂಗ್ರೆಸಿಗರು ವಿಧಾಯಕ ಕಾರ್ಯಕ್ರಮವನ್ನೊಪ್ಪಿಕೊಂಡಿದ್ದರೂ ಅದನ್ನು ಸಿದ್ಧಿಸುವಂಥ ಕೆಲಸವಾಗಿಲ್ಲ. ಆದ್ದರಿಂದ ಮುಂಬೈ ಪ್ರಾಂತ ಹಾಗೂ ಕಾಂಗ್ರೆಸಿಗರು ಖಾದಿ, ಗ್ರಾಮೋದ್ಯೋಗ ತಾಲಿಮಿಸಂಘ ಮುಂತಾದ ವಿಧಾಯಕ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಸಾಧಿಸುವಂತೆ ತಕ್ಷಣದಿ ಪಾಕಬೇಕೆಂದು ಗೊತ್ತುಮಾಡಲಾಯಿತು.

ಮಹಾತ್ಮರ ಸಲಹೆ.

ರಚನಾತ್ಮಕ ಕಾರ್ಯಕ್ರಮದ ಮೂಲಕ ಪೂರ್ಣ ಸ್ವರಾಜ್ಯವನ್ನು ಹೊಂದುವುದೇ ನಿಜವಾದ ಅಹಿಂಸಾತ್ಮಕ ಮತ್ತು ಸತ್ಯ ಪೀಡೆಯ ಸಾಧನ ಪೂರ್ಗವೆಂಬುದನ್ನು ಕಾರ್ಯಕರ್ತರು ಖಂಡಿತ ತಿಳಿಯಬೇಕು. ಆದನ್ನು ಪೂರ್ತಿಗೊಳಿಸುವುದೆಂದರೆ ಸಂಪೂರ್ಣ ಸ್ವಾತಂತ್ರ್ಯಗಳಿಸಿದಂತೆಯೇ ಸರಿ. 40 ಕೋಟಿ ಜನರು ತಮ್ಮ ಉನ್ನತಿಗಾಗಿ ರಚನಾತ್ಮಕ ಕಾರ್ಯಕ್ರಮದಲ್ಲಿ ನಿರತರಾಗಿರುವುದು ಎಷ್ಟು ಚೆನ್ನಾಗಿದೆ ಎಂದು ನಾವು ಕಲ್ಪಿಸಿಕೊಂಡಬಹುದು. ಇದರಿಂದ ಪರದೇಶಿ ಅಧಿಕಾರವನ್ನು ಹೊರತಳ್ಳುವ ಮತ್ತು ಸಂಪೂರ್ಣ ಸ್ವಾತಂತ್ರ್ಯವನ್ನು ತಂದುಕೊಂಡಬುದೆಂಬುದನ್ನು ಯಾರು ಸಂದೇಹಿಸುವದು? 40 ಕೋಟಿ ಜನರು ಇದರಲ್ಲಿ ಸಹಕರಿಸುವುದೆಂದರೆ ಕೆಲವಧಿಗೆ ಹಾಸ್ಯಾಸ್ಪದವೆನಿಸುವುದು. ಅದು ಸ್ವಲ್ಪ ಮಟ್ಟಿಗೆ ನಿಜವಾದರೂ ಮನಃಪೂರ್ವಕ ಕೆಲಸಗಾರರಿಂದ ಆ ಕಾರ್ಯಕ್ರಮವನ್ನು ಇತರ ಎಲ್ಲಾ ಯೋಜನೆಗಳಿಗಿಂತ ಯಶಸ್ವಿಯಾಗಿ ಮಾಡಬಹುದು. ಈ ಹಿಂಸಾತ್ಮಕವಾದ ಯೋಜನೆಗೆ ಸರಿಸಮಾನವಾಗುವುದು ಬೇರೊಂದು ನನ್ನ ಮಟ್ಟಿಗೆ ತೋರುವುದಿಲ್ಲ.

ಸಾರ್ವಜನಿಕ ಮತ್ತು ವೈಯಕ್ತಿಕ ಸತ್ಯಾಗ್ರಹಗಳು ರಚನಾತ್ಮಕ ಕಾರ್ಯಕ್ಕೆ ಸಹಕಾರಿಗಳು. ಸಶಸ್ತ್ರ ದಂಗೆಯು ಬಹಲು ಇದನ್ನು ಉಪಯೋಗಿಸಬಹುದು. ಸಶಸ್ತ್ರ ದಂಗೆಗೆ ತರಬೇತಿನ ಅವಶ್ಯವಿರುವಂತೆ ರಚನಾತ್ಮಕ ಕಾರ್ಯಕ್ಕೂ ಅದು ಅವಶ್ಯಕ. ಸಶಸ್ತ್ರ ದಂಗೆ ಏಳುವುದು ಸಂದರ್ಭಾನುಸಾರವಾಗಿ. ಆದೇ ರೀತಿ ಸತ್ಯಾಗ್ರಹದ ಪ್ರಶ್ನೆ ಇರುತ್ತದೆ. ಆದುದರಿಂದ ರಚನಾತ್ಮಕ ಕಾರ್ಯಕರ್ತರು ಕಾನೂನು ಮುರಿಯುವಿಕೆಯ ಸಮಯ್ದು ಕಾದಿರಬಾರದು. ರಚನಾತ್ಮಕ ಶ್ರಮವು ಆಯ ಶಸ್ವಿಗೊಳಿಸಲು ಪ್ರಯತ್ನಗಳಾಗವಾಗ ಮಾತ್ರ ಆವರು ಸಿದ್ಧರಾಗಿ ನಿಲ್ಲಬೇಕು.

ಸಂಕಷ್ಟಗಳನ್ನನುಭವಿಸದೆ ಸ್ವರಾಜ್ಯ ದೊರೆಯದು ಹಿಂಸೆ ಕಾರ್ಯದಲ್ಲಿ ಸತ್ಯಕ್ಕೆ ಲೋಪಬರುತ್ತದೆ. ಅಹಿಂಸೆಯಲ್ಲಿ ಸತ್ಯವು ಸದಾ ವಿಜಯಿಯಾಗುತ್ತದೆ. ಈ ಮೂಲ ತತ್ವವು ಓದುಗರಿಗೆ ಮನಗಂಡರೆ ರಚನಾತ್ಮಕ ಕಾರ್ಯಕ್ರಮದಲ್ಲಿ ಅವರಿಗೆ ಅಭಿರುಚಿ ತನ್ನಷ್ಟಕ್ಕೆ ಹುಟ್ಟುವುದು. ಅದು ರಾಜಕೀಯದಷ್ಟೆ ಸ್ವಾರಸ್ಯವುಳ್ಳದಾಗುತ್ತದೆ.

ರಚನಾತ್ಮಕ ಕಾರ್ಯಕ್ರಮದಲ್ಲಿ ಕೃಷಿಕನಿಗೆ ಪ್ರಧಾನ್ಯತೆಕೊಡಬೇಕು. ಅವನು ಸ್ವಂತ ಜಮೀನಿಲ್ಲದ ಶ್ರಮಜೀವಿ ಇರಲಿ, ಇಲ್ಲವೆ ಆಸ್ತಿವಂತನಾದ ರೈತನಿರಲಿ, ರೈತನೇ ಮುಖ್ಯ ವ್ಯಕ್ತಿ. ಭೂವಿಯ ಹುಟ್ಟುವಳಿಯು ಅದರ ಹಕ್ಕುದಾರನಾದ ಜಮೀನ್ದಾರನಿಗಿಂತಲೂ ರೈತನಿಗೆ ಸಲ್ಲತಕ್ಕದ್ದಾದರೂ ಅವನು ಅದನ್ನು ಹಿಂಸಾತ್ಮಕವಾಗಿ ಬಲಾತ್ಕಾರದಿಂದ ಪಡೆಯಲು ಪ್ರಯತ್ನಿಸಬಾರದು. ಜಮೀನ್ದಾರರು ತಮ್ಮನ್ನು ಸುಲಿಗೆಮಾಡದಂತೆ ಅವರು ಕಾರ್ಯ ನಡಿಸಬೇಕು. ಇದಕ್ಕೆ ಒಕ್ಕಲಿಗರೊಳಗೆ ಹತ್ತಿರದ ಸಹಕಾರ ಆವಶ್ಯವಿದೆ. ಇದಕ್ಕಾಗಿ ಪ್ರತ್ಯೇಕ ಸಂಘಗಳು ರಚಿಸಲ್ಪಡಬೇಕು.

ಕೆಸಾನರು ಹೆಚ್ಚಾಗಿ ಅಶಿಕ್ಷಿತ ವರ್ಗದವರು. ಆವರಿಗೆ ಪ್ರೌಢ ಶಿಕ್ಷಣ ಪದ್ಧತಿಯ ಮೂಲಕ ವಿದ್ಯೆಕೊಡಬೇಕು. ತೃಪ್ತಿಕರನಾದ ಸಾಮಾನ್ಯ ಜೀವಿತಕ್ಕೆ ಬೇಕಾಗುವಷ್ಟು ಮಜೂರಿ, ಕೃಷಿ ಮಜೂರರಿಗೆ ಸಿಗುವಂತಾಗಬೇಕು. ಆರೋಗ್ಯಕರವಾದ ಆಹಾರ, ವಸತಿ, ಮತ್ತು ಚಟ್ಟಿಬರಿಗಳು.

ಭೂ ಪರಿಸ್ಥಿತಿಯನ್ನು ಪರಿಶೀಲಿಸಬೇಕು. ಮತ್ತು ಕೃಷಿಕರ ಸಾಲದ ಹೊರೆಯನ್ನು ಕಮ್ಮಿ ಮಾಡುವ ಉಪಾಯಗಳನ್ನು ಹುಡುಕಬೇಕು. ಜಾನುವಾರುಗಳ ಸಮಸ್ಯೆಯು ನಮ್ಮ ದೇಶದಲ್ಲಿ ಅತೀ ಪ್ರಾಮುಖ್ಯದ್ದು. ತರಬೇತು ಹೊಂದಿದ ಕೆಲಸಗಾರರು ಆದರ ಹೊಣೆಗಾರಿಕೆಯನ್ನು ವಹಿಸಬೇಕು.

ವಿದ್ಯಾರ್ಥಿ ವರ್ಗವೂ ಪ್ರಾಮುಖ್ಯವಾದ ಒಂದು ವರ್ಗ. ನಮ್ಮಲ್ಲಿ ಯೋಗ್ಯ ಮೂದರಿಯ ಕೆಲಸಗಾರರಿದ್ದರೆ ಆವರು ಪ್ರಾಥಮಿಕ ವರ್ಗದಲ್ಲಿ ಕಲಿಯುವ ಚಿಕ್ಕ ವಿದ್ಯಾರ್ಥಿಗಳ ನಡುವಿನಲ್ಲೂ ಕೆಲಸ ಮಾಡಬೇಕೆಂದು ನಾನು ಬಯಸುತ್ತೇನೆ. ಶಾಲಾ ವಯಸ್ಸಿನಿಂದ ಅವರನ್ನು ವಶಪಡಿಸಿಕೊಳ್ಳಬೇಕು. ರಾಜಕೀಯ ಚಳವಳಿದಲ್ಲಿಲ್ಲಿ ಅವರನ್ನು ಉಪಯೋಗಿಸಿಕೊಳ್ಳುವುದು ನನ್ನ ಇಚ್ಛೆಯಲ್ಲವೆಂಬುದನ್ನು ನಾನು ಪ್ರತ್ಯೇಕ ಹೇಳಬೇಕಾಗಿಲ್ಲ. ಈಗ ಸದ್ಯಕ್ಕೆ ಶಾಲೆಗಳೆಲ್ಲಾ ಸರಕಾರದ ಹತೋಟೆಯಲ್ಲಿವೆ. ಆದ ಪ್ರಯುಕ್ತ ವಿದ್ಯಾರ್ಥಿಗಳ ಶಿಕ್ಷಣವು ದೋಷಭರಿತವಾಗಿದೆಯೆನ್ನಬೇಕು. ದೇಶದ ರಾಜಕೀಯ ಪರಿಸ್ಥಿತಿಯು ಎ

(4ನೇ ಪುಟ ನೋಡಿ)

ಕೊ ಡ ಗು

ತಾ. ೧೦-೧೧-೧೯೪೪ಳನೇ ಶುಕ್ರವಾರ

ಪ್ರತೀಕಾರ.

ಹಿಂದೂದೇಶವು ಸ್ವತಂತ್ರವಲ್ಲದ ಕಾರಣದಿಂದ ಆದರ ಜನತೆಗೆ ಇರುವ ಕಷ್ಟಸಂಕಷ್ಟಗಳು ಒಂದೆರಡಲ್ಲ. ಪರರಾಷ್ಟ್ರಗಳಿಗೆ ಹೋದರೆ ಇವರು ದಾಸ್ಯದಲ್ಲಿರುವ ರಾಷ್ಟ್ರದ ಪ್ರಜೆಗಳೆಂದು ಪೂಸ್ಯತೆ ಇಲ್ಲ. ಅಂತರಾಷ್ಟ್ರೀಯ ಸಭೆ ಸಮ್ಮೇಳನಗಳಲ್ಲಿ ಯೋಗ್ಯ ಪ್ರಾತಿನಿಧ್ಯವಿಲ್ಲ. ಈಗೀಗ ಈ ಕಷ್ಟಗಳು ಇನ್ನಷ್ಟು ಹೆಚ್ಚಾಗತೊಡಗಿನೆ. ಹಿಂದೂದೇಶದಿಂದ ಆಫ್ರಿಕಾಕ್ಕೆ ಹೋಗಿ ಅನೇಕ ಜನ ಭಾರತೀಯರು ನೆಲಸಿರುವರು. ಆಫ್ರಿಕವು ಇಂದು ಸೌಂದರ್ಯವ ಬೀಡಾಗಿ, ಸಕಲ ಸಂಪದಭಿವೃದ್ಧಿಯಿಂದೊಡಗೂಡಿದ ನಂದನವನವಾಗಿದ್ದರೆ ಅದು ಈ ಭಾರತೀಯರ ಪರಿಶ್ರಮದ ಫಲದಿಂದ. ಅದೂ ಅಲ್ಲದೆ ಈ ಯುದ್ಧದಲ್ಲಿ ಅಕ್ಷರಾಷ್ಟ್ರಗಳು ಆಫ್ರಿಕಾದ ಹಲವು ಭಾಗಗಳನ್ನು ವಶಪಡಿಸಿಕೊಂಡು ಮುಂದರಿಯುತ್ತಿದ್ದಾಗ ತಮ್ಮ ರಕ್ತದ ಓಕುಳಿ ಹರಿಸಿ ಶತ್ರುವನ್ನು ಹಿಮ್ಮೆಟ್ಟಿಸಲು ಭಾರತೀಯರು ಮಾಡಿದ ಸಾಹಸವನ್ನು ಸರ್ವರೂ ಮನಸಾರೆ ಹೊಗಳಿದ್ದಾರೆ. ಆದರೆ ಇವಕ್ಕೆಲ್ಲ ಪ್ರತಿಫಲವಕಾಗಿ ಭಾರತೀಯರಿಗೆ ದೊರೆತುದೇನು? ತಿರಸ್ಕಾರ! ಭಾರತೀಯರು ಕಪ್ಪು ಜನರು; ನಾಗರೀಕರಲ್ಲ; ಅವರು ಆಫ್ರಿಕಾದಲ್ಲಿ ಹೊಸ ಆಸ್ತಿ ಕೊಂಡುಕೊಳ್ಳಕೂಡದು. 50-60 ವರ್ಷಕ್ಕೆ ಮೊದಲೇ ಅಲ್ಲಿ ನೆಲಸಿ ತಮ್ಮ ಬೆವರು ನೀರಿನಿಂದ ಆಸ್ತಿಗಳಿಸಿದ ಹಿಂದೀಯರಾದರೂ ಅನೇಕ ನಿರ್ಬಂಧಗಳಿಗೊಳಗಾಗಿದ್ದಾರೆ. ಈ ರೀತಿಯ ನಿರ್ಬಂಧ, ತೊಂದರೆಗಳಿಂದಾಗಿ ಅಲ್ಲಿರುವ ಭಾರತೀಯರ ಜೀವನವು ಬಹು ಕಷ್ಟಕರವಾಗಿ ಪರಿಣಮಿಸಿದೆ. ಆಫ್ರಿಕಾವು ಅಲ್ಲಿ ಈ ದಿನ ದರ್ಪದಿಂದ ವರ್ತಿಸುತ್ತಿರುವ ಬಿಳಿ ಜನರದ್ದೂ ಅಲ್ಲ. ಅಲ್ಲಿಯ ಮೂಲ ನಿವಾಸಿಗಳಾದ ನೀಗ್ರೊ ಜನರ ಸಂಖ್ಯೆ ದಿನೆ ದಿನೆ ಕಡಿಮೆಯಾಗುತ್ತಿದೆ. ಅಲ್ಲಿರುವ ಭಾರತೀಯರಂತೆಯೇ ಬಿಳಿ ಜನರೂ ವಲಸೆಬಂದವರು. ಹಾಗಿರುವಾಗ ತಮ್ಮದೇ ಆದ ಒಂದು ಸರಕಾರದ ಬೆಂಬಲವಿರುವ ಕಾರಣ ಅವರು ಭಾರತೀಯರಿಗೆ ಈ ರೀತಿ ಕಿರುಕುಳ ಕೊಡುತ್ತಿರುವರು. ನಿಜ, ಪರದಾಸ್ಯದಲ್ಲಿರುವ ಹಿಂದೀ ಸರಕಾರವು ಅವರನ್ನು ಪ್ರತಿಭಟಿಸುವಷ್ಟು ಶಕ್ತವಾಗಿಲ್ಲ.

ದಕ್ಷಿಣ ಆಫ್ರಿಕಾದ ಈ ವರ್ಣದ್ವೇಶದ ಅತಿರೇಕವನ್ನು ನೋಡಿದರೆ ಯಾರಿಂದಲೂ ಸಹಿಸುವದು ಸಾಧ್ಯವಿಲ್ಲ. ಯುದ್ಧದ ನಂತರ ನವಜಗತ್ತನ್ನು ನಿರ್ಮಿಸಬೇಕು, ಸಾರ್ವತ್ರಿಕ ಶಾಂತಿಯನ್ನು ಸ್ಥಾಪಿಸಬೇಕೆಂಬ ಪ್ರಧಾನ ಮಂತ್ರಿ ಚರ್ಚಿಲ್ಲರ ಕೈಗೊಂಬೆಯಾದ ಸ್ಮಟ್ಸ್ ರವರೇ ಆಫ್ರಿಕಾದಲ್ಲಿನ ಈ ವ್ಯವಹಾರಕ್ಕೆ ಕಾರಣರು. ಯುದ್ಧದ ಈ ಬಿಕ್ಕಟ್ಟಿನಲ್ಲೇ ಹಿಂದೀಯರನ್ನು ತುಳಿದು ಹಾಕುವ ಧೋರಣೆಯನ್ನು ಕೈಕೊಂಡವರು ಮುಂದಿನ ಜಗತ್ತನ್ನು ರೂಪಿಸುವ ಕಾಲಕ್ಕೆ ಹೇಗೆ ವರ್ತಿಸಿಯಾರು? ಮಿತ್ರಶಿಬಿರದ ಬ್ರಿಟಿಷರ ಹಿಂದೂದೇಶದಲ್ಲಿಯ ವರ್ತನೆಯಾಗಲೀ, ಆಫ್ರಿಕಾದಲ್ಲಿಯ ನೀತಿಯಾಗಲೀ ಮುಂದಿನ ಶಾಂತಿಸ್ಥಾಪನೆಗೆ ಸಹಾಯಕವಾಗಿಲ್ಲ.

ದಕ್ಷಿಣ ಆಫ್ರಿಕಾದಲ್ಲಿ ಹಿಂದೀಯರಿಗೆ ಕೊಡುತ್ತಿರುವ ಉಪದ್ರವನ್ನು ಖಂಡಿಸುವ ಠರಾವೊಂದು ಕೇಂದ್ರ ಶಾಸನ ಸಭೆಯಲ್ಲಿ ಮೊನ್ನೆ ಬಂತು. ಆಫ್ರಿಕಾ ಸರಕಾರದ ನೀತಿಯನ್ನು ಖಂಡಿಸಿ, ಅಲ್ಲಿರುವ ಹಿಂದೀಯರಿಗೆ ಕೊಡುತ್ತಿರುವಂತೆಯೇ ಹಿಂದೂದೇಶದಲ್ಲಿರುವ ಆಫ್ರಿಕನರಿಗೂ ತೊಂದರೆಕೊಡಬೇಕೆಂದು ತೀರ್ಮಾನವಾಗಿದ್ದೆ, ಮುಸ್ಲಿಂಲೀಗ್ ಪಕ್ಷದ ಮುಂದಾಳಾದ ಶ್ರೀ ಲಿಕ್ವೆಟ್ ಅಲಿಖಾನರು ಹೇಳಿದಂತೆ, 'ನನ್ನ ದೇಶೀಯರಿಗೆ ಉಪದ್ರಕೊಡುತ್ತಿರುವ, ಅವರ ಅವಹೇಳನವನ್ನೂ ಮಾಡುತ್ತಿರುವ ರಾಷ್ಟ್ರದ ಒಂದು ಪಿಳ್ಳೆಯನ್ನೂ-ಅತನು ಸೈನ್ಯದಲ್ಲಿರಲಿ ಯಾ ನಾಗರೀಕನಾಗಿರಲಿ ನನ್ನ ದೇಶದಲ್ಲಿರಕೂಡದು.' ಸರ್ ಸುಲ್ತಾನ್ ಅಹಮದರೆಂಬಂತೆ, 'ಮದಾಂಧರಾಗಿ ಮೆರೆಯುವ ಆಫ್ರಿಕಾದ ಅಡಳಿತಗಾರರ ತಲೆಗೆ ಸ್ವಲ್ಪ ಬುದ್ಧಿ ಬರುವಂತೆ ಮಾಡಲು ಹಿಂದೂದೇಶದಿಂದ ಒಂದು ಸೈನ್ಯವನ್ನೇ ಕಳುಹಿಸುವದು ಅವಶ್ಯವಿದೆ. ಆದರೆ ಭಾರತವು ಪರದಾಸ್ಯದಲ್ಲಿದ್ದು ಈ ರೀತಿ ಪರಿಣಾಮಕಾರಕವಾದ ಪ್ರತೀಕಾರವನ್ನು ಮಾಡಲಾರದು.' ಹೇಗೂ ತನ್ನ ನಿಶೇಧವನ್ನು ವ್ಯಕ್ತಮಾಡಿ ಆಫ್ರಿಕದ ಅಡಳಿತಗಾರರಿಗೆ ಸರಿಯಾದ ಪ್ರತೀಕಾರವಲ್ಲದಿದ್ದರೂ ಪ್ರಥಮ ಹೆಜ್ಜೆಯಾಗಿ ನಿರ್ಬಂಧಗಳನ್ನು ಹಾಕಲು ತೀರ್ಮಾನಿಸಿದ್ದು ಯೋಗ್ಯವಿದೆ. ಅಲ್ಲಿರುವ ಹಿಂದೂದೇಶದ ಹೈಕಮಿಷನರನ್ನು ಹಿಂದಕ್ಕೆ ಕರೆಕಳುಹಿಸಿ, ಆಫ್ರಿಕಾದ ಮೇಲೆ ಸರ್ವನಿಶೇಧ ಹಾಕುವದಲ್ಲದೆ ಆರ್ಥಿಕ ದಿಗ್ಬಂಧನವನ್ನು ಕೈಕೊಳ್ಳುವದೂ ಅವಶ್ಯವಿದೆ. ಈ ರೀತಿ ಕಾರ್ಯಕ್ರಮ ಕೈಕೊಂಡರೆ ಹಿಂದೀ ಸರಕಾರವು ತನ್ನ ಗೌರವಕ್ಕೆ ಸರಿಯಾಗಿ ವರ್ತಿಸಿದಂತಾಗುವದು.

ಒ ಳ ದೇ ಶ.

ಕೊ ಡ ಗು ಸಹಕಾರ ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ಶ್ರೀ ಅಪ್ಪಾರಂಡ ತಿಮ್ಮಯ್ಯನವರನ್ನು ಆರಿಸಲಾಗಿದೆ.

ಕೊಡಗು ಜೇನುಬೇಣ ಸಹಕಾರ ಸಂಘದ ವಾರ್ಷಿಕ ಸಭೆಯು ತಾ. 16-12-44 ರಲ್ಲಿ ವೀರಾಜಪೇಟೆ ಹೈಸ್ಕೂಲಿನಲ್ಲಿ ಮಿ. ಜಿ. ಸ್ಕಾಟ್‌ಲೆಂಡರವರ ಅಧ್ಯಕ್ಷತೆಯಲ್ಲಿ ನಡೆಯುತ್ತದೆಂದು ಗೊತ್ತಾಗಿದೆ.

ಪೊನ್ನಂಪೇಟೆಯ ಶಾರದಾಶ್ರಮದಲ್ಲಿ 1942 ರಿಂದ ಧರ್ಮಾರ್ಥವಾಗಿ ಹೋಮಿಯೋಪೆತಿ ಔಷಧಾಲಯವನ್ನು ತೆರೆದು 1942 ರಲ್ಲಿ 850 ರೋಗಿಗಳಿಗೂ, 1943 ರಲ್ಲಿ 2031 ರೋಗಿಗಳಿಗೂ 1944 ರ ಸಾಲ್ಕು ತಿಂಗಳುಗಳಲ್ಲಿ 2201 ರೋಗಿಗಳಿಗೂ ಚಿಕಿತ್ಸಾ ಸಹಾಯವನ್ನು ಆಶ್ರಮದವರು ಸಾರ್ವಜನಿಕರ ನೆರವಿನಿಂದ ಮಾಡಿದ್ದಾರೆ. ಈ ಔಷಧಾಲಯಕ್ಕೆ ಒಳ್ಳಂದು ಕಟ್ಟಡ ಕಟ್ಟುವ ಕೆಲಸವನ್ನು ಪ್ರಾರಂಭಿಸಿದ್ದಾರೆ. ಈ ಸಾರ್ವಜನಿಕರ ಉಪಯೋಗದ ಕಾರ್ಯಕ್ಕೆ ಕೊಡುವ ಸರ್ವಸಹಾಯವನ್ನೂ ಆದರದಿಂದ ಸ್ವೀಕರಿಸುತ್ತಾರಾಗಿ ತಿಳಿಸುತ್ತಾರೆ.

ಕೊಡಗಿನ ಚೀಫ್ ಕಮಿಷನರು ಈ ತಾ. 27 ಮತ್ತು 28 ರಲ್ಲಿ ಡೆಲ್ಲಿಯಲ್ಲಿ ನಡೆಯುವ ಅಖಿಲ ಭಾರತ ಆಹಾರ ಸಮ್ಮೇಳನಕ್ಕೆ ಹೋಗಲಿರುವರೆಂದು ತಿಳಿದುಬರುತ್ತದೆ.

ಕೊಡಗು ಜಿಲ್ಲಾ ಬೋರ್ಡಿನಿಂದ ಕರ್ನೂರ್ ಬಾನಿಧಿಗೆ ಮಂಜೂರ್ಮಾಡಿದ್ದ ರೂ. 200 ನ್ನು ಕೊಡಕೂಡದಾಗಿ ಚೀಫ್ ಕಮಿಷನರು ಆಜ್ಞಾಪಿಸಿರುವರು.

ಅಖಿಲ ಭಾರತ ಸಹಕಾರ ದಿನವನ್ನು ಮಡಿಕೇರಿ, ಮೂರ್ನಾಡು, ಕಾರ್ಗುಂದ, ಭಾಗಮಂಡ್ಲ, ಫ್ರೇಜರ್ ಪೇಟೆ, ಸೋಮವಾರಪೇಟೆ, ಶನಿವಾರಸಂತೆ, ನಾಪೋಕ್ಲು, ಪಾರಾಣೆ, ವೀರಾಜಪೇಟೆ, ಅಮ್ಮತ್ತಿ, ಪೊನ್ನಂಪೇಟೆ, ಶ್ರೀಮಂಗಲ ಈ ಸಹಕಾರ ಕೇಂದ್ರಗಳಲ್ಲಿ ಆಶ್ರಯದಲ್ಲಿ ತಾ. 4-11-44 ರಲ್ಲಿ ಆಚರಿಸಲಾಯಿತು.

ಕೊಡಗಿನ ಬತ್ತ ವ್ಯಪಸಾಯಗಾರರ ಪ್ರತಿನಿಧಿಗಳ ವಿಶೇಷಗೊಂಡು ಈ ತಾ. 6ರಲ್ಲಿ ವೀರಾಜಪೇಟೆಯಲ್ಲಿ ನಡೆದು ಸಹಕಾರಿ ಮಾರ್ಕೆಟಿಂಗ್ ಫೆಡರೇಶನ್, ಕೊಡಗು ಜವಿನಾರ್ದರ ಸಂಘ, ಬತ್ತ ವ್ಯಾಪಾರಿಗಳ ಸಂಘ ಮತ್ತು ಇಂಡಿಯನ್ ಕಾಫಿ ಪ್ಲಾಂಟರುಗಳ ಸಂಘ, ಈ ಸಂಸ್ಥೆಗಳ ಒಬ್ಬೊಬ್ಬರು ಪ್ರತಿನಿಧಿಗಳಿಂದ ಕೂಡಿದ ಒಂದು ನಿಯೋಗ ಗೋಷ್ಟಿಯನ್ನು ಬತ್ತಕ್ಕೆ ಬೆಲೆಯನ್ನು ಹೆಚ್ಚಿಸುವ ವಿಚಾರ ಮಾತಾಡಲು ಇಂಡಿಯಾ ಸರಕಾರಕ್ಕೆ ಕಳುಹಿಸಲು ತೀರ್ಮಾನಿಸಲಾಗಿದೆ.

ರಣಭೇರಿ.

'ಜಪಾನರ ನೌಕಾಪಡೆಯನ್ನು ನಾಶಮಾಡಲಾಯಿತು' ಎಂಬ ವಾರ್ತೆಯು ಮಿತ್ರರ ಕಡೆಯಿಂದ ಬಂದಿದೆಯೆಂದು ಕಳೆದ ವಾರ ಬರೆದಿದ್ದೆನು. ನಾನು ಕಳೆದ ವಾರ ಸ್ವಲ್ಪ ಸೂಚನೆ ಕೊಟ್ಟಂತೆ ಅದು ಅಷ್ಟು ಸುಲಭದ ಕೆಲಸವಲ್ಲವೆಂದು ಯೋಚಿಸಿದರೆ ತಿಳಿಯುವದು. ಫಿಲಿಫೈನಿನ ದ್ವೀಪಸ್ತೋಮದಲ್ಲಿ ಒಂದಾದ ಲೇಟೆಯಲ್ಲಿ ಮಿತ್ರರು ಇಳಿದಾಕ್ಷಣ ಯೂರೂ ತಮ್ಮ ವಿಶಿಷ್ಟಸೇನೆಗಳನ್ನೆಳ್ಳಾ ಅಲ್ಲಿಗೆ ಕಳುಹಿಸಲಾರರು. ಆದರಲ್ಲೂ ಕುಟಿಲ ನೀತಿಜ್ಞರಾದ ಜಪಾನರು ಎಂದೂ ತಮ್ಮ ಸರ್ವನೌಕಾದಳವನ್ನು ಅಲ್ಲಿಗೆ ಕಳುಹಿಸಿರಲಿಕ್ಕಿಲ್ಲ. ಮೊನ್ನೆಯ ಫಿಲಿಫೈನ್ ಕಾಳಗದಲ್ಲಿ ನಾಶವಾದ ಜಪಾನ್ ಹಡಗುಗಳಲ್ಲಿ 'ಯಾಮಟೋ' ಮತ್ತು 'ಮುಶಾಸಿ' ಎಂಬ ಎರಡು ಹೊಸ ಹಡಗುಗಳು ಕಂಡುಬಂದಿವೆ. ಜಪಾನರ ನೌಕಾಪಡೆಯ ಹಡಗುಗಳ ಪಟ್ಟಿಯಲ್ಲಿ ಈ ಹೆಸರುಗಳು ಇಲ್ಲವೇ ಇಲ್ಲವಂತೆ. ಇದರಿಂದ ವ್ಯಕ್ತವಾಗುವದೇನೆಂದರೆ ಜಪಾನರು ಜಗತ್ತಿಗೆ ತಮ್ಮಲ್ಲಿರುವದಾಗಿ ಯಾವ ನೌಕಾಪಡೆಯು ಹೆಸರು ಕೊಟ್ಟಿದ್ದಾರೋ ಇವಕ್ಕೆ ಭಿನ್ನವಾಗಿ ಬೇರೆ ಪಡೆಯೂ ಅವರಲ್ಲಿವೆಯೆಂದು. ಮೇಲಿನ ಹಡಗುಗಳು ಸಾಧಾರಣದವುಗಳಲ್ಲ. 40000 ಟನ್ನಿಗಿಂತ ಭಾರವಾದ ಮಹಾಹಡಗುಗಳು. ಪ್ರತಿಯೊಂದರಲ್ಲೂ 16 ಇಂಚಿನ ತೋಪುಗಳು ಅಳವಡಿಸಲ್ಪಟ್ಟಿದ್ದುವಂತೆ. ಅಂದಮೇಲೆ ಜಪಾನರು ಈ ವರೆಗೆ ತಮಗೆ ನಿಶ್ಚಿತ ಅವಧಿಯಲ್ಲಿ ತಮಗೆ ಬೇಕಾದ ಹಡಗು, ವಿಮಾನಗಳನ್ನು ಕಟ್ಟಿಸಿದ್ದರಾಗಿರುವರೆಂಬುದಕ್ಕೆ ಬೇರೆ ನಿದರ್ಶನಬೇಕೆ.

ಈ ಮಧ್ಯೆ ಬರ್ಮಾ, ಚೀನಾ ಮತ್ತು ಹಿಂದೂಸ್ಥಾನದಲ್ಲಿಯ ಜಪಾನ್ ದಳಗಳ ಸೇನಾಪತಿಯಾದ ಜನರಲ್ ಸ್ಟಿಲ್‌ವೆಲ್ಲರು ಹಿಂದಕ್ಕೆ ಕರೆಸಲ್ಪಟ್ಟಿದ್ದಾರೆ. ಸ್ಟಿಲ್‌ವೆಲ್ಲರು ಚತುರಂಗಸೇನಾಪತಿಗಳೆಂದು ಹೆಸರು ಪಡೆದಿದ್ದಾರೆ. ಆದರೆ ಕಂಡಪದ್ಯನ್ನು ಕಂಡಂತೆ ಹೇಳುವ ಅವರ ನೀತಿಯು ಅವರನ್ನು ಈ ತೊಂದರೆಗೆ ಸಿಕ್ಕಿಸಿತು. ಅವರ ಹಿಂದೂಸೈನ್ಯವನ್ನು ಠೀಕೆಸಿದ್ದರಿಂದ ಪೈಸರಾಯ್ ವೇವೆಲ್ಲರ ಸಿಟ್ಟಿಗೆ ಗುರಿಯಾಗಿದ್ದರು. ಚೀನಾಕ್ಕೆ ಅಮೇರಿಕವು ಕೊಡುತ್ತಿರುವ ಸಹಾಯವನ್ನು ಜಪಾನರ ಮೇಲೆ ಪ್ರಯೋಗಿಸುವ ಬದಲು ಚೀನಾದಲ್ಲಿಯ ಅಂತಃಕಲಹಗಳನ್ನು ನಿವಾರಿಸಲು ಚಿಯಾಂಗರು ಉಪಯೋಗಿಸಿಕೊಳ್ಳುತ್ತಿದ್ದಾರೆಂದು ಹೇಳಿದ್ದರಿಂದ ಚಿಯಾಂಗರ ಸಿಟ್ಟಿಗೂ ಪಾತ್ರರಾಗಿದ್ದರು. ಚಿಯಾಂಗರೂ ಸ್ಟಿಲ್‌ವೆಲ್ಲರ ಮೇಲೆ ಕೆಲವು ಆರೋಪಹೊರಿಸಿ ಚೀನಾದಲ್ಲಿ ಜಪಾನರಿಗೆ ಸಹಾಯವಾಗಲು ಇವರು ದೃಷ್ಟಿ ಬರ್ಮಾದ ಕಡೆಗೆ ಹರಿಸಿರುವದು ಕಾರಣವೆಂದಿದ್ದರು. ಈ ರೀತಿ ಇವರಲ್ಲಿ ತಿಕ್ಕಾಟವಾಗಿ ಸ್ಟಿಲ್‌ವೆಲ್ಲರನ್ನು ಹಿಂದಕ್ಕೆ ಅಮೇರಿಕವು ಕರೆಸಿದೆ.

ಈ ಗೀತೆ ಚೀನಾ ಅಮೇರಿಕಗಳೊ
ಮತಭೇದ ವ್ಯಕ್ತವಾಗುವಾಗಲೇ ಚೀ
ಜಪಾನುಗಳಿಗೆ ಒಪ್ಪಂದವಾ
ಯೆಂಬ ಕಥೆಯನ್ನು ರಷ್ಯಾದ ಪ
ತ್ರಿಕೆಗಳು ಸಾರುತ್ತಿವೆ. ಮಾಸ್ಕೋದ
ಬುದ್ಧ ಮತ್ತು ಕೂಲಿಗಾರರು' ಎಂ
ಪತ್ರಿಕೆಯು, 'ಜೈನಾಗಡಿಯ ಕೆಲ
ಭಾಗಗಳಲ್ಲಿ ಸಂಧಾನವು ಸ್ಥಾಪಿತ
ದಂತಿದೆ' ಎಂದಿದೆ. ಈ ಸಂಧಾನ
ಕಾರಣವಾದರೂ ಜೈನಾದಲ್ಲಿರುವ
ತರಿಕ ಜಗಳವೆಂದೇ ಅದು ಹೇಳು
ದೆ. ನಮ್ಮ ವಾಚಕರಿಗೆ ತಿಳಿದಿರು
ತೆ ಜೈನಾದಲ್ಲಿ ಚಿಯಾಂಗ್ ಕೈಶೆಕ
ಅಧಿಕಾರಕ್ಕೆ ವಿರುದ್ಧವಾಗಿ 'ಚನ್'
ತೋದರರು ಕಮ್ಯೂನಿಷ್ಟರನ್ನು ಕ
ಕೊಂಡು ಅಂತರಿಕ ಬಂಡಾಯವೂ
ತ್ತಿರುವರು. ಅವರು ಇತ್ತಲಾಗಿ
ಬಲರಾಗಿದ್ದಾರೆಂದು ವಾರ್ತೆಗಳು
ಸುತ್ತವೆ. ಇವರ ಪ್ರಭಾವದಿಂದ
ನಗಳಲ್ಲಿ ಈ ರೀತಿಯ ಸಂಧಾನವಾಗಿ
ಯೆಂದು ಮೇಲ್ಕಂಡ ಪತ್ರಿಕೆ ಸೂಚಿ
ಸ್ತವೆ. ಜನ ನಮ್ಮ ಇದನ್ನು ಹರ್ಷ
ಂದ ಸ್ವಾಗತಿಸುವಂತೆ. ಯುದ್ಧ
ಈ ಸಂದಿಗ್ಧ ಸಮಯದಲ್ಲಿ ಮಿತ್ರ ಶ
ರದಲ್ಲಿ ಈ ರೀತಿಯ ಅನ್ಯಸಖ್ಯವೂ
ಷ್ಟಿರುವದು ನಿಜವಾಗಿಯೂ ಹಿತ
ರವಾದುದು.

ಅತ್ತ ರಷ್ಯಾದಲ್ಲಿ ರಷ್ಯಾದ ಕ್ರಾಂ
ಯ 27 ನೇ ವರ್ಷಿಕೋತ್ಸವದ ಸಂ
ರ್ಭದಲ್ಲಿ ಭಾಷಣ ಮಾಡುತ್ತಾ ಸ್ಟಾ
ನಸ್ಟಿಷ್ ಈ ರೀತಿ ನುಡಿದಿದ್ದಾನೆ. 'ಇ
ನ ಯುದ್ಧವು ನಾಲ್ಕನೇ ವರ್ಷ. ಈ
ರ್ಷವಿಡೀ ನಮಗೆ ವಿಜಯಪರಂಪರೆ
ೇ. ಜರ್ಮನರು ಹಿಮ್ಮೆಟ್ಟಿ ತಮ್ಮ
ೀಶದೊಳಗೆ ಹೊಕ್ಕಿದ್ದಾರೆ. ಈ ಯು
ದಲ್ಲಿ ಈ ವರೆಗೆ ಜರ್ಮನರ 120
ನ್ಯವಿಜಯನುಗಳನ್ನು ನಾವ ನೋಲಿ
ನಾಶಮಾಡಿರುವೆವು. ಈಗ ನಮ್ಮ
ಲ್ಲಿ ಜರ್ಮನರ 204 ಸೈನ್ಯ ವಿಭಾ
ಗಳಿವೆ. ಇವುಗಳಲ್ಲಿ 180 ನಾ
ಶ ಅಥವಾ ಜರ್ಮನರವು. ಉಳಿದವು ಜ
ರ್ಮನ್ ಸಹಾಯಕ ರಾಷ್ಟ್ರಗಳಾದ
ಹಂಗೇರಿ ಮೊದಲಾದವುಗಳವು. ಈ
ಮೊದಲಿನ ಯುದ್ಧಗಳಿಗಿಂತಲೂ ಈ
ಯುದ್ಧದಲ್ಲಿ ನಾಝಿ ಜರ್ಮನಿಯು
ಮಾನುಷ್ಯಶಕ್ತಿಗೆ ಮೀರಿದ ಸಾಹಸವ
ನ್ನು ತೋರಿಸಿದೆಯೆಂಬುದನ್ನು ನಾವು
ಒಪ್ಪಬೇಕು. ಎಷ್ಟಾದರೂ ಜರ್ಮ
ನಿಯು ವಿನಾಶದತ ಹಿಡಿಯುವೇಕಾ
ವಿತ್ತ್ಯ ಜರ್ಮನಿಯ ಬದ್ಧವಿರೋಧಿ
ರಷ್ಯವು ಜರ್ಮನರ ವಿಜಯವೂರ್ಗ
ವಲ್ಲಿ ನಿಂತುದರಿಂದ ಹೀಗಾಯಿತು.
ಇಡೀ ಯೂರೋಪು ರಷ್ಯನರಿಂದ ರ
ಕ್ಷಿಸಲ್ಪಟ್ಟಿತು. ದ್ವಿತೀಯರಂಗವನ್ನು
ತೆರೆದು ನಮ್ಮ ಮಿತ್ರರು ಜರ್ಮನಿಯ
ಸುಮಾರು 75 ಸೈನ್ಯಡಿವಿಜನುಗಳನ್ನು
ಆಕಡೆ ಸೆಳೆಯದಿದ್ದಪಕ್ಷನಮಗೆ ಈ ಗ
ಡಿಯಲ್ಲಿ ಇಷ್ಟು ಸುಲಭವಾಗಿ ಜಯ
ದೊರೆಯುತ್ತಿರಲಿಲ್ಲ. ಬ್ರಿಟನ್, ಅ
ಮೇರಿಕಾ, ರಷ್ಯಾ ಇವುಗಳಲ್ಲಿ ಅಭಿ
ಪ್ರಾಯ ಭೇದ ಬಂದಿಸೆ, ಒಡಕುಂಟಾ
ಗಿಸೆಯೆಂದು ಹಲವರು ಹೇಳುವದು
ಕೇಳಿಬಂದಿದೆ. ಅಭಿಪ್ರಾಯಭೇದ ಇ
ದ್ದೇ ಇರುತ್ತದೆ. ಆದರೆ ಅವರಿಂದ
ನಮ್ಮ ಧ್ಯೇಯವನ್ನು ನಾವು ಮರೆತಿ
ಲ್ಲ. ಒಂದು ಕುಟುಂಬದ ವ್ಯಕ್ತಿಗಳ
ಲ್ಲಿಯೇ ಅಭಿಪ್ರಾಯಭೇದ ಬರುವಾಗ
ಇಂಥಾ ಅಖಂಡ ರಾಷ್ಟ್ರಗಳೊಳಗೆ ಬ
ರುವದು ಸ್ವಾಭಾವಿಕ. ಆದರೆ ಅವು
ಪ್ರಮುಖವಿಲ್ಲ.'

ಪ್ರತ್ಯಕ್ಷ ರಣರಂಗವನ್ನು ನೋ
ಡಿದರೆ ಪೂರ್ವ ಪ್ರಶ್ಯಾದಲ್ಲಿ ಭೀಕರ
ಯುದ್ಧವಾಗುತ್ತಿದೆ. ರಷ್ಯನರನ್ನು
ಹಿಂದಕ್ಕೆ ಓಡಿಸಲು ನಾಝಿಗಳು ಬ
ಹು ಪ್ರಯತ್ನಮಾಡುತ್ತಿದ್ದಾರೆ. ಆದ
ರೆ ಈ ವರೆಗೆ ಸಾಧ್ಯವಾಗಿರುವದಿಲ್ಲ.
ಇತ್ತ ಪಶ್ಚಿಮದಲ್ಲಿ ಏಜೆನ್ನಿನ ಹತ್ತಿರ
ಭಯಂಕರ ಕದನ ನಡೆಯುತ್ತಿದೆ. ಹ
ರ್ಟ್ಗೆನ್ ಗಡಿಯಲ್ಲಿ ಅತೀ ಉಗ್ರ ಸೇ
ನೆಗಳನ್ನು ಜರ್ಮನರು ಮುಂದೆ ನಿಲ್ಲಿ
ಸಿ ಕಾದುತ್ತಿದ್ದಾರೆ. ಕ್ಷಣಕ್ಷಣದಲ್ಲಿ
ನೂರಾರು ಶವಗಳು ಭೂಮಿಗೊರಗು
ತ್ತಿವೆ. ರಕ್ತದ ಕಾಲುವೆ ಹರಿಯು
ತ್ತಿವೆ. ಟ್ಯಾಂಕುಗಳ, ವಿಮಾನಗಳ,
ಕ್ಷೇಪುಗಳ ಮಹಾರವವು ಗಗನದಲ್ಲಿ
ಮೊಳಗುತ್ತಿವೆ. ಒಂದು ಕ್ಷಣ ಮಿತ್ರ
ರ ಹತ್ತಿರವಿದ್ದರೆ ಮತ್ತೊಂದು ಕ್ಷಣ
ಶತ್ರುಗಳ ಕೈಯಲ್ಲಿ ಹೀಗೆ ನಗರಗಳು
ಕೈ ಬದಲಾಯಿಸುತ್ತಿವೆ. ವಿಜಯಲಕ್ಷ್ಮೀ
ಯು ಜಯಮಾಲೆಯನ್ನು ಹಿಡಿದು
ಕಕ್ಕಾಬಿಕ್ಕಿಯಾಗಿ ನೋಡುತ್ತಿದ್ದಾಳೆ.

ನಾಲ್ಕನೇ ಬಾರಿ ಪ್ರೆಸಿಡೆಂಟ್

ಅಮೇರಿಕಾದ ಪ್ರೆಸಿಡೆಂಟರ ಚು
ನಾವಣೆಯು ತಾ. 7-11-44ರಲ್ಲಿ ನ
ಡೆಯಿತು. ಪ್ರಜಾ ಪ್ರಭುತ್ವ ಪಕ್ಷದ
ಪರ ಹಿಂದಿನ ಪ್ರೆಸಿಡೆಂಟರಾಗಿದ್ದ ರೂ
ಸ್‌ವೆಲ್ಟರೇ ಉಮೇದ್ವಾರರಾಗಿ ನಿಂತಿ
ದ್ದರು. ರಿಪಬ್ಲಿಕ್ ಪಕ್ಷದ ಪರ ನ್ಯೂ
ಯಾರ್ಕಿನ ಗವರ್ನರರಾದ ಮಿ. ಡೆವಿ
ಯವರು ನಿಂತಿದ್ದರು. ಈಗ ಬಂದಿರು
ವ ಲೆಕ್ಕದಂತೆ ರೂಸ್‌ವೆಲ್ಟರಿಗೆ
15,771,666 ಮತಗಳೂ, ಡೆವಿಯ
ರಿಗೆ 13,594,735 ಮತಗಳೂ ದೊ
ರೆತಿವೆ. ಇನ್ನು ವಿದೇಶವಲ್ಲಿ ಸೈನ್ಯದಲ್ಲಿ
ರುವವರ ಮತಗಳು ಬಂದು ತಲಪಿರು
ವುದಿಲ್ಲ. ಹೇಗೂ ರೂಸ್‌ವೆಲ್ಟರೇ ಜ
ಯಶಾಲಿಗಳಾದರೆಂದು ಹೇಳಬಹುದು.
ನಾಲ್ಕು ಬಾರಿ ಅಂದರೆ ಮಧ್ಯೆ ಬಿಡು
ವಿಲ್ಲದೆ 16 ವರ್ಷಗಳ ವರೆಗೆ ಪ್ರೆಸಿಡೆಂ
ಟರಾಗುವದು ಅಮೇರಿಕಾದ ಯಾವ ವ್ಯ
ಕ್ತಿಗೂ ಇತಿಹಾಸದಲ್ಲೇ ಇದು ಪ್ರಥ
ಮ. ನಾರ್ಮಂಡಿಯ ಇತಿಹಾಸದಲ್ಲೇ ಇದು ಪ್ರಥ
ಮವೆನ್ನಬಹುದು. ರೂಸ್‌ವೆಲ್ಟರ ಚುನಾವಣೆಯಿಂದ ಅಮೇರಿಕ
ನ್ನಿಲ್ಲಿ ಜನರು ರೂಸ್‌ವೆಲ್ಟರ ಆಡಳಿತ
ನೀತಿಯನ್ನು ಮೆಚ್ಚಿದ್ದಾರೆಂಬುವುದು
ಮನ್ಯವಾಗುವದು.

ಬಾತ್ಮಿ

ನಾಪೋಕ್ಲು ನಾಡಿನವರ ಶ್ರೇಯಸ್ಸಿಗೆ.

ನಾಪೋಕ್ಲುನಾಡಿಗೆ ಸೇರಿದ ನಮಗಳ ಬಸ್ ಪ್ರ
ಯಾಣಕ್ಕಿರುವ ಕಷ್ಟನಷ್ಟವನ್ನು ವರ್ಣಿಸುವುದು ಸಾಧ್ಯ
ವಿಲ್ಲ ಪ್ರತಿ ವರ್ಷ ಆಕ್ಟೋಬರ್ ತಿಂಗಳಿಂದ ಮ
ಡಿಕೇರಿಯಿಂದ ನಾಪೋಕ್ಲಿಗಾಗಿ ಭಾಗಮಂಡ್ಲಕ್ಕೆ
ಬಸ್ ಲೈನ್ ನಿರ್ವಾಹವಾಗುವದು ವಾಡಿಕೆ ಇತ್ತು.
ಆದರೆ ಈ ವರ್ಷ ನವಂಬರ್ ಆದರೂ ಈ ನಿರ್ವಾ
ಹಗಳಲ್ಲ. ನಾಪೋಕ್ಲು ನಾಡಿನ ಸುತ್ತ ಮುತ್ತ
ಲಿನ ಜನರು ನಮಗೆ ಬೇಕಾದ ಯಾವುದಕ್ಕೂ ಮ
ಡಿಕೇರಿಗೆ ಹೊಗಬೆ ಕಾಯಿದು. ಕಾಯಿಲಸ್ಥರೂ
ಮಡಿಕೇರಿಗೆ ಹೋಗುತ್ತಾರೆ. ಕಾಯಿಲಬಿಂದಾಗಿ
ಆಸ್ಪತ್ರೆಗೆ ಹೊರಟ ನಿತ್ರಾಣರಾದ ಅನೇಕರು ಬೆಟ್ಟ
ಕ್ಕೇರಿಯಲ್ಲಿ ಬಂದು ಬಸ್ ಕಾಯುತ್ತಾ ಇದ್ದು
ಭಾಗಮಂಡ್ಲದಿಂದಲೇ ಭರ್ತಿಯಾಗಿ ಬರುವ ಬಸ್ಸಿ
ನಲ್ಲಿ ಸ್ಥಳ ದೊರೆಯದೆ ಪಡುವ ಬವಣೆಯನ್ನು ಕ
ಣ್ಣಾರೆ ಕಂಡಿದ್ದೇನೆ. 'ಈ ರಸ್ತೆಗಾಗಿ ಈಗ ಓಡು
ತ್ತಿರುವದು ಕೇವಲ ಒಂದು ಬಸ್ಸು. ಈ ಲೈನಿನ
ಬಸ್ಸಿಗೆ ಪೆಟ್ರೋಲ್ ಕೊಡಲಾಗುವುದಿಲ್ಲವೆಂದು,
'ಗೇಸ್ ಪ್ಲಾಂಟ್' ಹಾಕಬೇಕೆಂದು ಆಜ್ಞೆ ಇತ್ತಿ
ದ್ದಾರಂತೆ. ಇದು ನಿಜವಾದರೆ ಈ ಭಾಗದ ಜನ
ರಿಗೆ ಬಹು ತೊಂದರೆಯಾಗುವದು. ದೇಶದ ಹಲ
ವಾರು ಬಸ್ಸುಗಳು ಕೇವಲ ಪೆಟ್ರೋಲಿನಿಂದ ಓಡು
ತ್ತಿರುವಾಗ ಈ ಭಾಗಕ್ಕೆ ಬರುವ ಒಂದೆರಡು ಬ
ಸ್ಸುಗಳಿಗೆ 'ಗೇಸ್ ಪ್ಲಾಂಟೇ?' ಈ ನಾಡಿನಲ್ಲಿ ಜ
ನಸಂಖ್ಯೆಗೆ ತಕ್ಕಂತೆ ಬಸ್ಸುಗಳಿಲ್ಲ. ಇರುವ ಬಸ್ಸುಗಳಿಗೆ
ಸರಿಯಾಗಿರುವ ಪ್ರಯಾಣದ ತೊಂದರೆಯನ್ನು ಸಂಬಂ
ಧಿಸಿದ ಅಧಿಕಾರಿಗಳು ಖುದ್ದು ಪರಾಂಬರಿಸಿದರೆ ನೇ
ದ್ಯವಾದೀತು. ಆದ್ದರಿಂದ ಈ ಭಾಗಕ್ಕೆ ಮೂಡೂ
ಲಿನಂತೆ ಒಂದು ಬಸ್ ಲೈನು ಹೆಚ್ಚಿಸುವದಲ್ಲದೆ ಪೆ
ಟ್ರೋಲ್ ಬಸ್‌ಗಳನ್ನು ಈ ಲೈನಿಗೆ ಹಾಕಬೇಕೆಂ
ದು ಪ್ರಾರ್ಥಿಸುತ್ತೇನೆ.

'ಚೇತು ಗ್ರಾಮ ನಿವಾಸಿ.'

ಶ್ರೀ ಶಾರದಾ ಕಾಫಿ ಪುಡಿ.

ಯಾವುದೊಂದು ಮಿಶ್ರಣ ವಿಲ್ಲದೆ ಪ್ರತಿ ದಿನವೂ ಹುರಿದು ಪುಡಿ ಮಾಡಿಸಿದ್ದನ್ನೇ ಕೊಳ್ಳಿರಿ.

ಕಾಫಿ ಹುಡಿಯ ಕ್ರಯ
ರಾತ್ಲಿಗೆ ರೂ. 1-11-6

ನಿಮ್ಮ ಮನೆಗಳಲ್ಲಿರುವ ಕಾಫಿ ಬೀಜವನ್ನು ಕ್ರಮ ಪ್ರಕಾರವಾಗಿ ಹುರಿದು ಪುಡಿ ಮಾಡಿಸುವುದಕ್ಕೆ ಕೆಳಗಿನ ವಿಳಾಸವನ್ನು ಗಮನಿಸಿರಿ.
ಹುಡಿ ಮಾಡಲು
ಅಳತೆ ಸೇರಿಗೆ ಆ. 0-1-6

SHRI SHARADA COFFEE HOME (WORKS),
6) - McDOWELLS BUILDINGS, *MERCARA.*

ಅನುಭವಸ್ಥ ಕೆಲಸಗಾರರಿಂದ ತಯಾರಿಸಿದ ಸುಪ್ರಸಿದ್ಧ ಮಂಗಳೂರು
ಮೋಹನ್ ಬೀಡಿಗಳನ್ನೇ ಸೇದಿ ಆನಂದ ಪಡೆಯಿರಿ.
ಎಲ್ಲಾ ತಂಬಾಕು ಅಂಗಡಿಗಳಲ್ಲಿಯೂ ಮಾರಲ್ಪಡುತ್ತದೆ.
2) ಕೊಡಗಿನ ಪ್ರವರ್ತಕರು:—
ವೀರರಾಜೇಂದ್ರಪೇಟೆಗೆ— ಶ್ರೀ ಯು. ಕೆ. ಮುದ್ದಪ್ಪನವರು
ಮಡಿಕೇರಿಗೆ— ಶ್ರೀ ದುರ್ಗಾ ಸ್ಟೋರ್ಸ್.
ಮೋಹನ ಬೀಡಿ ವರ್ಕ್ಸ್, 273, ರೈಲ್ವೆ ಸ್ಟೇಷನ್ ರಸ್ತೆ, ಮಂಗಳೂರು.

Navabharat Book Depot Udipi South India

— ನೋಡಿದರೆ ಬಿಡದಿರುವ ಕೆಲವು ಪುಸ್ತಕಗಳು —

	ರೂ. ಆ.		ರೂ. ಆ.		ರೂ. ಆ.
ಸುಲಭದಲ್ಲಿ ಇಂಗ್ಲಿಷ್	1.4	ಮೂರು ಪ್ರಹಸನಗಳು	0.14	ವೀರಭೂಮಿ	0.2
ಯುವಕರಿಗೆ ಮತ್ತು ವಯಸ್ಕರಿ		ಸ್ವತಂತ್ರಜೀವನೋಪಾಯ	0.3	ವತ್ಸಲಾ	0.8
ಗೆ ಸುಲಭವಾಗಿ ಇಂಗ್ಲಿಷನ್ನು		ಪುರುಷ ಪಥ	0.4	● ಕವಿತೆಗಳು	
ಅನ್ಯ ಸಹಾಯವಿಲ್ಲದೆ ಕಲಿಸು		ಹೆಂಡ್ತಿ ಗಂಡನಾದರೆ	0.4	ಕಾವ್ಯ ಸಾಮ್ರಾಜ್ಯ	0.12
ವ ಇಂಗ್ಲಿಷ್ ಸ್ವಯಂಬೋಧಿನಿ		● ಕತೆಗಳು		ಮುಗುಳು	0.3
● ನಾಟಕಗಳು		ನಗೆನೋಟಗಳು	0.14	ಶ್ರೀಮುಖ	1.0
ಪ್ರೇಮವಿಜಯ	0.12	ಅನ್ನದೇವರು		ಪುರಂದರದಾಸರ ಕೀರ್ತನೆ	1.0
ದೇಶಭಕ್ತ	1.4	ಮತ್ತು ಇತರ ಕತೆಗಳು	1.0	ಭಗವದ್ಗೀತಾ (ಮೂಲ—	
ಪ್ರಭಾವತಿ ಯೂರು	0.12	ಭಾರತೀಯ ಕತೆಗಳು	0.14	ಸಿಲ್ಕ್ ಬೈಂಡು)	1.4
ಕುಶಲವ	0.5	ನಾಂದಾದೀಪ	0.10	● ಇತರ ಪುಸ್ತಕಗಳು	
ಸಂಶಯ ಪಿಶಾಚಿ	0.8	ನಾಡಕತೆಗಳು	0.3	ಮುಂದಿನ ದೇವರು	0.3
ರಂಗಭೂಮಿ	0.8	ಕಂಡೂಕಾಣದನೋಟಗಳು	0.8	ರಾಷ್ಟ್ರಸಭೆಯ ಇತಿಹಾಸ	2.8
ಪ್ರಕಾಶ	1.12	ನಾರೀ ಹೃದಯ	0.14	ಬಾಲವಾಙ್ಮಯ	0.3
ಧರ್ಮ ಸಂಕಟ	0.4	ಅಂತರಂಗದ ಕತೆಗಳು	0.10	ಮಿತ ಸಂತತಿ	0.8
ಆರೋಗ್ಯ ಪ್ರತಾಪ	0.12	ಪ್ರೇಮಸ್ವಯಂವರ	0.6	ನಿಶ್ಚಯ ಜ್ಞಾನ	0.8
ಪಂಚಾರತಿ	0.6	ಆಹುತಿ ಇತ್ಯಾದಿಕತೆಗಳು	0.12	ಪಾಪಪೂರಿತ ಮಕ್ಕಳು	1.3
ಪ್ರತೀಕಾರ	0.6	ಲೋಪಾಮುದ್ರೆ	0.6	ಟಿಗುರು	0.6
ಸೇವಾಪಥ	0.3	● ಕಾದಂಬರಿಗಳು		ಇತರ ಪುಸ್ತಕಗಳ ಕೆಟಲಾಗಿಗ	
		ಸನ್ಯಾಸಿಯ ಯೋಗಿನಲ್ಲಿ	0.8	2 ಆಣೆ ಸ್ಟಾಂಪಿಟ್ಟು ಬರೆಯಿ	

ನವಭಾರತ ಪುಸ್ತಕ ಭಂಡಾರ, ರಿಜಿಸ್ಟರ್ಡ್, ಪಬ್ಲಿಷರ್ಸ್, ಉಡುಪಿ, ದ. ಕ

3 Navabharat Book Depot Udipi, South India

"ಟ್ರಾಪಿಕಲ್"

ಪಂ. ಮೋತಿಲಾಲ್ ನೆಹರೂ, ಹಕೀಮ್ ಅಜಮಲ್‌ಖಾನ್,
ಡಾ. ಯಂ. ಎ. ಅನ್ಸಾರಿ, ಸುಭಾಶ ಚಂದ್ರ ಬೋಸ್
ಮೊದಲಾದ ರಾಷ್ಟ್ರೀಯ ಧುರೀಣರಿಂದ ಸ್ಥಾಪಿಸಿ,
ಬೆಳೆಸಲ್ಪಟ್ಟ ರಾಷ್ಟ್ರೀಯ ವಿಮಾ ಸಂಸ್ಥೆ.

ಜೀವನ ಸಂಧ್ಯಾಕಾಲದಲ್ಲಿ ಜೀವನಪಿಯೇ ನಿಮ್ಮನ್ನು ರಕ್ಷಿಸುವದು. ಆದ್ದರಿಂದ ಹಿಂದ
ದೇಶದ ರಾಷ್ಟ್ರೀಯ ಸಂಸ್ಥೆಗಳಲ್ಲಿ ಹಿರಿದಾದ ಟ್ರಾಪಿಕಲಿನಲ್ಲಿ ವಿಮೆ ಮಾಡಿ
ಮುಖ್ಯ ಖಜೇರಿ: ಹೊಸ ಡಿಲ್ಲಿ] [ಹೆಚ್ಚಿನ ಮಾಹಿತಿಗೆ ಈ ಪತ್ತೆಗೆ ಬರೆಯಿ
ಯಂ. ಯು. ಅಚ್ಚಣ್ಣ, ಯಂ. ರಂಗನಾಥಶೆಟ್
42) ಮಡಿಕೇರಿ. OR. ಬ್ರಾಂಚ್ ಮೇನೇಜರ್, ಮಂಗಳೂ

The Canara Banking Corporation Limited.
(Incorporated in British India)
ETD— Head Office —UDIPI, (S. K.) —1906

Paid up capital .. .. .. *Rs. 14,38,255*
Reserves .. .. *Rs. 4,10,000*
Total working Resources .. .. *Exceed Rs. 1 Crore*

ANNOUNCEMENT.

A Branch of the Bank has been opened at BOMBAY on 24—10—1944. 1st Floor, Ready money Mansions. Churchgate Street, Fort,

4)

ದಿ ಬೋಂಬೆ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.

— ಬೇಕಾಗಿದ್ದಾರೆ —

ಜನಬಳಿಕೆಯಿರುವ ಕಾರ್ಯಚತುರ ಏಜೆಂಟರು ಲಾಭದಾಯಕ ಶರತುಗಳ ಮೇಲೆ ಕೊಡಗಿನ ಉದ್ದಗಲಕ್ಕೆ ಬೇಕಾಗಿದ್ದಾರೆ. ಯೋಗ್ಯತೆ, ವಯಸುಗಳನ್ನು ಸೂಚಿಸಿ ಬರೆಯಿರಿ.

ಕೊಚ್ಚಿಕಾರ್ ಬ್ರದರ್ಸ್, ಲಿ.

ಮದ್ರಾಸ್ ಬ್ರಾಂಚಿನ ಸೆಕ್ರೆಟರಿಗಳು.

8) ಪಿ. ಬಿ. ನಂ. 337, ಮದ್ರಾಸು.

ಧಾತು ವೃದ್ಧಿ ರಸಾಯನ (ZANDU)

" ರ್ಯಾಕ್ಟೋ—ಫಾಸ್ಫೋ—ಮೂಲ್ಟ "

ಎಂಬ ಪ್ರಸಿದ್ಧ ಡಾಕ್ಟರುಗಳು ಮುಕ್ತ ಕಂಠದಿಂದ ಹೊಗಳುತ್ತಿದ್ದಾರೆ.

ಈ ರಸಾಯನ } ಕಾಯಿಲೆಯವರಿಗೆ, ಆರೋಗ್ಯದಿಂದಿರುವವರಿಗೆ, ಧಾತು ಕ್ಷೀಣತೆಯುಳ್ಳವರಿಗೆ, ರೋಗ ನಿವೃತ್ತಿಯಾಗಿ ಸುಧಾರಿಸಿಕೊಳ್ಳುವವರಿಗೆ, ಅಶಕ್ತರಿಗೆ ಟಾನಿಕ್.

ವಿದ್ಯಾರ್ಥಿಗಳಿಗೆ, ವಕೀಲರಿಗೆ, ವೈದ್ಯರಿಗೆ, ಡಾಕ್ಟರರಿಗೆ, ಶ್ರಮ ಜೀವಿಗಳಿಗೆ, ರೋಗಿಗಳಿಗೆ, ನಿರೋಗಿಗಳಿಗೆ, ಗೃಹಸ್ಥಾಶ್ರಮಿಗಳಿಗೆ, ಬ್ರಹ್ಮಚಾರಿಗಳಿಗೆ, ಸ್ತ್ರೀಯರಿಗೆ, ಪುರುಷರಿಗೆ—ಎಲ್ಲರಿಗೂ ಬೇಕಾದ ರಸಾಯನವಿದು. ಇದು ಜಠರಾಗ್ನಿಯನ್ನು ಸರಿಪಡಿಸುವುದು. ಮೆದುಳಿಗೆ ತಂಪನ್ನುಂಟುಮಾಡುವುದು, ನಾಲಿಗೆಗೆ ರುಚಿಯೂಡಿರುವುದು. ಇದರಲ್ಲಿ ನವಜೀವನಕರವಾದ ಎಲ್ಲಾ ವಿಟಮಿನ್ನುಗಳು ಕೆಂಪು ರಕ್ತ ಕಣಗಳನ್ನು ಹೆಚ್ಚಿಸುವ ಅಮೂಲ್ಯ ಔಷಧಿಗಳಿವೆ.

ಇದರಲ್ಲಿ ಇಲೆಕ್ಟರ್ ಫಾಸ್ಫೋಮೂಲ್ಟ್, ಹೆಪೋಗ್ಲೋಬಿನ್, ಸೋದಿಗ್ಲಿಸರೊ ಫಾಸ್ ಫೇಟ್ ಪೆಪ್ಟನ್, ಸಾಲ್, ಮೂಲ್ಟ್ ಎಕ್ಸ್‌ಟ್ರಾಕ್ಟ್, ದಾಕ್ಷಾಸವ ಮೊದಲಾದ ಪ್ರಸಿದ್ಧ ಔಷಧಿಗಳಂಶವಿದೆ. ಇಂದಿನಿಂದಲೇ ಸೇವಿಸಿ ಆನುಭವ ಪಡೆಯಿರಿ. ಇದು ಎಲ್ಲಾ ಪ್ರಸಿದ್ಧ ಔಷಧಿ ಷಾಪುಗಳಲ್ಲಿದೆ.

ಝುಂಡು ಫಾರ್ಮಸ್ಯುಟಿಕಲ್ ವರ್ಕ್ಸ್ ಲಿಮಿಟೆಡ್,
ಗೋಖಲೆ ರೋಡ್, ಬೋಂಬೆ.

10)

ಎಂಪೈರ್ ಆಫ್ ಇಂಡಿಯಾ
ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

46) ಸ್ಥಾಪನೆ:—೧೮೯೭.

ಇವನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ಪಷ್ಟ ಸಂಗತಿಗಳು.	ಒಟ್ಟು ಆದಾಯ	೯೭,೩೭,೦೦೦ ರೂಪಾಯಿ
	ಚಾಲ್ತಿಯಿರುವ ವಿಮೆ	೧೬,೪೯,೮೮,೦೦೦ ,,
	ಆಸ್ತಿ	೬,೩೦,೪೬,೧೦೦ ,,
ಕಂಪೆನಿಯ ಆದಿಯಲ್ಲಿ ಕೊಟ್ಟ ಕ್ಲೈಮುಗಳು		೮,೩೮,೦೦,೦೦೦ ,,

ಅಂಗ ಕಛೇರಿ:	ಏಜೆನ್ಸಿ	ಪ್ರಧಾನ ಕಛೇರಿ:
ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡ ರಸ್ತೆ, ಬೆಂಗಳೂರು.	ಆರ್ಜಿಗಳನ್ನು ಸ್ವಾಗತಿಸಿದೆ.	ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್ ಬೋಂಬೆ

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ವಸೂಲಾದ ಶೇರ್ ಮೊಬಲಗು ರೂ. 95,060, ಜಮಾ ಬಂದ ಠೇವಣಾತಿ 2,24,750 ವಸೂಲಾದ ಕ್ಲೇಮುನಿಧಿ 2,16,209, ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು 2,02,925.

ಈ ಬ್ಯಾಂಕಿನಿಂದ ಸಹಕಾರ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡುವುದಲ್ಲದೆ ಡಿಪಾಜಿಟ್ಟುದಾರರಿಗೆ ಅವರ ಡಿಪಾಜಿಟ್ಟು ಆಧಾರದ ಮೇಲೆ 90% ಕೊಡಲಾಗುತ್ತೆ. ನಿರಖು ಠೇವಣಾತಿಗಳಿಗೆ ಒಂದು ವರ್ಷದಿಂದ ಮೂರು ವರ್ಷಗಳ ವರೆಗೆ ಶೇಕಡ 2. ಮೂರು ವರ್ಷಗಳಿಂದ ಐದು ವರ್ಷಗಳ ವರೆಗೆ 2½. ಐದು ವರ್ಷಗಳಿಂದ ಹತ್ತು ವರ್ಷಗಳ ವರೆಗೆ 3½. ಹತ್ತು ಅದಕ್ಕಿಂತ ಮೇಲ್ಪಟ್ಟವುಗಳಿಗೆ 4½. ಸೇವಿಂಗ್ಸ್ ಬ್ಯಾಂಕ್ (on daily balance) ಡಿಪಾಜಿಟ್ಟುಗಳಿಗೆ ಶೇಕಡ 0—8—0. ವರ್ಷಕ್ಕೊಮ್ಮೆ ರಿಜಿಸ್ಟ್ರಾರವರು ಲೆಕ್ಕ ಪರಿಶೋಧನೆ ಮಾಡುತ್ತಾರೆ.

Edited, Printed and Published by P. I. Belliappa at 'Kodagu' Press Mercara, for 'Kodagu' Ltd.

ಚೀನ-ಜಪಾನ್.

ಫ್ಯಾಸ್ಕಿಸ್ಟ್ ರಾಷ್ಟ್ರಗಳ ಇಂದಿನ ದುರವಸ್ಥೆಯು ಮುತ್ತು ಬಿಡತನವು ಅದಿಯಿಂದ ನಡೆದು ಬಂದುದಲ್ಲ. ಪರಚಕ್ರಗಳ ಧಾಳಿಯು ಫಲಿತಾಂಶವಾಗಿ ಮುತ್ತು ರಾಜಕಾರಣದ ದೆಸೆಯಿಂದ ಇವುಗಳ ಸಂಪತ್ತು ಸಾವಕಾಶವಾಗಿ ಹ್ರಾಸಮಾಗತೊಡಗಿ ಇಂದಿನ ಬಿಡತನವು ಪ್ರಾಪ್ತವಾಗಿದೆಯೆಂದು ಹೆಳಲು ವಸೂ ಅಡ್ಡಿಯಿಲ್ಲ. ಎಲ್ಲವೂ ನಾಶವಾದನಂತರ ಈಗ ಫ್ಯಾಸ್ಕಿಸ್ಟ್ ರಾಷ್ಟ್ರಗಳ ಕೈಯ್ಯಲ್ಲಿ ಉಳಿದುದು ಕೇವಲ ಸ್ವಾಭಿಮಾನ ಮಾತ್ರ.

ಚೀನಾ-ಜಪಾನ್ ಯುದ್ಧವು ಪ್ರಾರಂಭವಾಗಿ ಈಗ ಎಂಟು ವರ್ಷಗಳಾಗುತ್ತಾ ಬಂತು. ಸಾಕಷ್ಟು ಜನ, ಧನ, ಯಂತ್ರೋಪಕರಣಗಳ ಪೂರೈಕೆಯು ಚೀನದ ಕೈಯ್ಯಲ್ಲಿ ಇದ್ದುದೇ ಆದರೆ ಜಪಾನು ಇಂದು ಹೇಳ ಹೆಸರಿಲ್ಲದಂತೆ ನಿರ್ನಾಮವಾಗುತ್ತಿತ್ತು. ಆದರೆ ಇವುಗಳ ಕೊರತೆಯಿಂದಾಗಿ ಚೀನವು ಇಂದು ಕೃಷ್ಟಪರಂಪರೆಗೆ ಒಳಗಾಗಿದೆ. ಕೇವಲ ಸ್ವಾಭಿಮಾನದ ಆಯುಧದ ಸಹಾಯದಿಂದ ಅದು ಈಗ ದೀರ್ಘ ಕಾಲಾವಧಿಯ ವರೆಗೆ ಜಪಾನಿನೊಂದಿಗೆ ಕಾದಿತು. ಇನ್ನೂ ಕಾದುತ್ತಲಿದೆ.

ಬರ್ಮಾ ಮಾರ್ಗವು ಸುರಕ್ಷಿತವಾಗಿದ್ದ ವೇಳೆಯಲ್ಲಿ ಸಂಯುಕ್ತ ರಾಷ್ಟ್ರದವರು ಚೀನಕ್ಕೆ ಬೇಕಾದಷ್ಟು ಸಹಾಯವನ್ನು ನೀಡಬಹುದಾಗಿತ್ತು. ಆದರೆ ಆ ವೇಳೆಯಲ್ಲಿ ಬ್ರಿಟಿಷರ ರಾಜನೀತಿಯು ತೀರಬೇರೆಯಾಗಿತ್ತು. ಚೀನಕ್ಕೆ ತಾನು ಸಹಾಯ ಮಾಡಿದರೆ ಎಲ್ಲಿ ಜಪಾನು ಸಿಟ್ಟಗೇಳುವದೋ ಎಂದು ಯೋಚಿಸಿ ಬ್ರಿಟಿಷ್ ಸರಕಾರವು ಬರ್ಮಾ ಮಾರ್ಗವನ್ನು ಮುಚ್ಚಿಬಿಟ್ಟು ಚೀನದ ಜೀವನಾಡಿಯ ತಂತುವನ್ನು ಹರಿದು ಅದನ್ನು ಅದರ ಪಾಡಿಗೆ ಬಿಟ್ಟು ಬಿಟ್ಟಿತು.

ಮುಂದೆ ತನ್ನ ರಾಜ್ಯಕ್ಕೆ ಧಕ್ಕೆ ಬರುವ ವೇಳೆಯು ಬಂದೊದಗಲು ಮತ್ತು ಬರ್ಮಾ ಮಾರ್ಗವನ್ನು ಉಳಿಸಿಕೊಳ್ಳಲು ತನಗೆ ಶಕ್ಯವಿಲ್ಲವೆಂಬದನ್ನು ಅರಿತನಂತರ ಬ್ರಿಟಿಷ್ ಸರಕಾರವು ಅದನ್ನು ತೆಗೆಯಿತು. ಆದರೆ ವೇಳೆ ಮೀರಿ ಹೋದದ್ದರಿಂದ ಈ ಮಾರ್ಗದ ಪ್ರಯೋಜನವು ಚೀನಕ್ಕೆ ದೊರೆಯಲಿಲ್ಲ. ಮುಂದೆ ಜಪಾನೀಯರನ್ನು ಎದುರಿಸುವಲ್ಲಿ ಬ್ರಿಟಿಷರು ಅಸಮರ್ಥರಾದುದರ ಪರಿಣಾಮವಾಗಿ ಆ ಮಾರ್ಗವು ಬ್ರಿಟಿಷರ ಕೈಯಿಂದ ಜಾರಿ ಜಪಾನೀಯರ ಕೈಗೆ ಹೋಯಿತು.

ಯಾವ ಆಯುಧಗಳೂ ಸಾಕಷ್ಟು ಪ್ರಮಾಣದಲ್ಲಿ ಇಲ್ಲದಿದ್ದರೂ ಕೇವಲ ಸ್ವಾಭಿಮಾನದಿಂದ ಕಾದಿದ ಚೀನೀಯರಿಗೆ ಕೊನೆಗೆ ದೊರೆತುದಾದರೂ ಏನು? ರಷ್ಯಾದ ಹೀಯಾಳಿಕೆ. ಚೀನವು ಅತಿ ಪೂರ್ವದಲ್ಲಿ ಯುದ್ಧವನ್ನು ಸಾಕಷ್ಟು ಹುರುಪಿನಿಂದ ಮತ್ತು ಉತ್ಸಾಹದಿಂದ ಸಾಗಿಸಿಲ್ಲವೆಂದು ರಷ್ಯಾವು ಚೀನದ ಮೇಲೆ ಆಪವಾದ ಹೊರಿಸಿತು. ಚೀನದ ಸ್ಥಾನದಲ್ಲಿ ರಷ್ಯಾವು ಇದ್ದಿದ್ದರೆ ಅದು ಚೀನವನ್ನು ಹೀಯಾಳಿಸುತ್ತಿದ್ದಿಲ್ಲ.

ಕಡ ಮತ್ತು ಒತ್ತಿಯ ಖಾನೂನಿನನ್ವಯ ಸಂಯುಕ್ತ ರಾಷ್ಟ್ರಗಳಿಗೆ ಸಹಾಯ ಮಾಡಲು ತಾ. 30—6—1943ರೊಳಗಾಗಿ 1290 ಕೋಟಿ ಡಾಲರುಗಳನ್ನು ವೆಚ್ಚ ಮಾಡಿದ ಮತ್ತು ಈಗ ಪ್ರತಿ ತಿಂಗಳಿಗೆ ಸರಾಸರಿ ನೂರು ಕೋಟಿ ಡಾಲರುಗಳನ್ನು ನೆಚ್ಚ ಮಾಡುತ್ತಿರುವ ಅಮೇರಿಕವು ಕೂಡ ಚೀನಕ್ಕೆ ಸಾಕಷ್ಟು ಸಹಾಯವನ್ನು ಮಾಡಲಿಲ್ಲ. 20 ಕೋಟಿ ಚೀನೀಯರೊಂದಿಗಿರುವುದು ಈಗ ಕೇವಲ 6 ಸಾವಿರ ಮೋಟಾರು ಬಂಡಿಗಳು. ಅಮೇರಿಕದ ಚಿಕಾಗೋ ನಗರದ 40 ಲಕ್ಷ ಪ್ರಜೆಗಳಿಗಾಗಿ 63 ಸಾವಿರ ಮೋಟಾರುಗಳಿವೆ. ಇನ್ನಿತರ ಯುದ್ಧೋಪಕರಣಗಳು ಕೂಡ ಚೀನೀಯರೊಂದಿಗೆ ಇದೇ ಪ್ರಮಾಣದಲ್ಲಿ ಇವೆಯೆಂದು ಹೇಳಲು ಯಾವ ಆತಂಕವೂ ಇಲ್ಲ. ಇಷ್ಟು ನಿರ್ಬಲವಾದ ರಾಷ್ಟ್ರವನ್ನು ಸಂಯುಕ್ತ ರಾಷ್ಟ್ರವು ತನ್ನ ಮೂಲಿಕೆಯಲ್ಲಿ ಸೇರಿಸಿಕೊಳ್ಳಲು ಕಾರಣವಿದೆ. ಚೀನದ 40 ಕೋಟಿ ಪ್ರಜೆಗಳು ಅಚ್ಚಿನ ರಾಷ್ಟ್ರಗಳಿಗೆ ವಿರೋಧವಿರುವರೆಂದು ಜಗತ್ತಿಗೆ ಕೋರಿಸಿ ತಮ್ಮ ಪಕ್ಷಪಾತ ಜನ ಸಂಖ್ಯೆಯನ್ನು ಹೆಚ್ಚಿಸುವುದೇ ಇದರ ಮರ್ಮ. ಹಿಂದುಸ್ಥಾನದ ಒಪ್ಪಿಗೆಯಿಲ್ಲದೆ 40 ಕೋಟಿ ಹಿಂದೀಯರನ್ನು ಸಂಯುಕ್ತ ರಾಷ್ಟ್ರಗಳ ಮೂಲಿಕೆಯಲ್ಲಿ ಸೇರಿಸಿದ ಬ್ರಿಟನಿಗೆ ಯುದ್ಧದಲ್ಲಿ ತೊಡಗಿದ ಚೀನವನ್ನು ಸಹಾಯ ಮಾಡುವ ಆಶೆ ತೋರಿಸಿ ಸಂಯುಕ್ತ ರಾಷ್ಟ್ರಗಳ ಮೂಲಿಕೆಯಲ್ಲಿ ಸೇರಿಸಿಕೊಳ್ಳಲು ಕಷ್ಟವಾಗಿಲ್ಲ. ಮಾತ್ರವಲ್ಲದೆ ಹೀಗೆ ಸೇರಿಸಿಕೊಳ್ಳುವಲ್ಲಿ ಸಂಯುಕ್ತ ರಾಷ್ಟ್ರಗಳು ತನ್ನ ಸ್ವಾರ್ಥವನ್ನೇ ಸಾಧಿಸಿರುವವು. ಚೀನ ಜಪಾನ್ ಯುದ್ಧವು ನೆನೆಗುದಿಗೆ ಬಿದ್ದರೆ ತಮ್ಮ ಮೇಲೆ ಜಪಾನು ಏರಿ ಬರಲಿಕ್ಕಿಲ್ಲವೆಂಬುವುದೇ ಈ ಸ್ವಾರ್ಥದ ಮೂಲವಿದೆ.

ಸಂಯುಕ್ತ ರಾಷ್ಟ್ರದವರು ಏನೇ ಹೇಳಿಕೊಳ್ಳಲಿ. ಆತಿ ಪೂರ್ವದ ಯುದ್ಧದಲ್ಲಿ ಅವರು ಇನ್ನೂ ಹಿಂದುಳಿದಿರುವರು. ಫಿಲಿಫಾಯಿನ್ಸಿನ 7 ಸಾವಿರ ದ್ವೀಪಗಳಲ್ಲೊಂದಾದ ಲೈಟೆಯ ಕೆಲವನ್ನು ಜಯಿಸಿದ ಕೂಡಲೇ ಫಿಲಿಫಾಯಿನ್ಸಿನವನ್ನು ತಾವು ಸಂಪೂರ್ಣ ಗೆಲ್ಲುವೆನೆಂದು ಅವರು ಈಗ ಹೇಳಿಕೊಳ್ಳುತ್ತಿರುವರಲ್ಲ!

ಅದು ಏನೇ ಇರಲಿ. ಸಂಯುಕ್ತ ರಾಷ್ಟ್ರಗಳು ಚೀನಕ್ಕೆ ಇಂದು ಎಲ್ಲ ರೀತಿಯ ಯುದ್ಧೋಪಕರಣಗಳನ್ನು ಒದಗಿಸಿಕೊಡಲೇ ಬೇಕಾಗಿದೆ. ಇದರಲ್ಲಿಯೇ ಅವುಗಳ ಹಿತವಿದೆ. ಈ ಸಹಾಯದ ದೆಸೆಯಿಂದಾಗಿ ಚೀನವು ಜಪಾನಿನೊಂದಿಗೆ ಯಶಸ್ಸೀರೀತಿಯಿಂದ ಕಾದಬಹುದಲ್ಲದೆ ಸಂಯುಕ್ತ ರಾಷ್ಟ್ರಗಳಿಗೆ ಜಪಾನಿನ ಭಯವೂ ತಪ್ಪುವುದು. ಮಾತ್ರವಲ್ಲದೆ ಜಪಾನಿನ ಮೇಲೆ ಏರಿ ಹೋಗಿ ಅದನ್ನು ನಾಶಗೊಳಿಸಲೂ ಶಕ್ಯವಾಗುವುದು. ಇಲ್ಲವಾದರೆ ಪರಿಸ್ಥಿತಿಯು ಹದಗೆಡುವುದು. ಚೀನವು ಜಪಾನಿಗೆ ಶರಣುಹೋಗುವ ಚಿಹ್ನೆಗಳು ಕಾಣಲಾರಂಭಿಸಿವೆ.

ಜಪಾನನ್ನು ಸೋಲಿಸಲು ಕನಿಷ್ಟ 18 ತಿಂಗಳುಗಳು ಬೇಕೇ ಬೇಕೆಂದು ಚರ್ಚಿಲ್ಲರು ಹೇಳಿದ್ದಾರೆ. ಈಗ ಚೀನದೊಂದಿಗಿರುವ ಯುದ್ಧಾಸ್ತ್ರಗಳ ಪೂರೈಕೆಯನ್ನು ನೋಡಿದರೆ ಈ 18 ತಿಂಗಳುಗಳ ನ್ನಾದರೂ ಕಳೆಯುವುದು ಅದಕ್ಕೆ ತಕ್ಷ ಸಾಧ್ಯವಿದೆ. ಇದು ಸಾಲದುದಕ್ಕೆ ಚೀನದಲ್ಲಿ ಆಂತರಿಕ ಕಲಹವು ಕೂಡ ಈಗ ತಲೆ ಎತ್ತಿರುವುದು. ಚಾನ ಸಹೋದರರ ನೇತೃತ್ವದಲ್ಲಿ ಹೊಸ ರಾಜಕೀಯ ಪಕ್ಷವೊಂದು ರಚಿಸಲ್ಪಟ್ಟಿದೆ. ಚೀನದ ಆರ್ಥಿಕ ಪರಿಸ್ಥಿತಿಯು ಸಂಪೂರ್ಣ ಕೆಟ್ಟು ಹೋಗುವ ಮೊದಲು ಜಪಾನಿನೊಡನೆ ಒಸ್ಪಂದ ಮಾಡಿಕೊಳ್ಳುವುದು ಈ ಪಕ್ಷದ ಗುರಿಯಾಗಿದೆ. ಚಿಯೊಂಗ್ ಸರಕಾರ ಮತ್ತು ಕಮ್ಯುನಿಸ್ಟರೊಳಗೆ ತಿಕ್ಕಾಟಕ್ಕೆ ಪ್ರಾರಂಭವಾಗಿದೆ. ಕಡ ಮತ್ತು ಒತ್ತಿಯ ಖಾನೂನಿನನ್ವಯ ಎಲ್ಲ ಸಹಾಯವನ್ನು ನೀಡಲು ಮುಂದೆ ಬಂದ ಅಮೇರಿಕವು ಚೀನದ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಇನ್ನೂ ಹೆಚ್ಚು ಸಹಕರಿಸುತ್ತಿಲ್ಲವೇಕೆ? ಚೀನವು ಏಶಿಯಾಟಿಕ್ ರಾಷ್ಟ್ರವೆಂದೇ?

ಅಂತೂ ಅತೀ ಪೂರ್ವದ ಯುದ್ಧದ ಬಗ್ಗೆವು ಬೇರೆಯಾಗುವ-ಕಾಲವೀಗ ಸನ್ನಿಹಿತವಾಗಿದೆ, ಏಶಿಯಾಟಿಕ್ ರಾಷ್ಟ್ರಗಳನ್ನು ವರ್ಣ ದ್ವೇಷದ ದೃಷ್ಟಿಯಿಂದ ನೋಡುವ ಅಮೇರಿಕನರು ತಮ್ಮ ಧೋರಣೆಯನ್ನು ತಿದ್ದಿಕೊಳ್ಳತಕ್ಕೇ ಬೇಕು. ತಾವು ಹೇಳಿಕೊಳ್ಳುವ ಯುದ್ಧ ಗುರಿಯನ್ನು ಪೂರೈಸುವುದಕ್ಕಾಗಿಯಾದರೂ ಅವರು ವರ್ಣ ದ್ವೇಷದ ಭೂತವನ್ನು ಮರೆತು ಚೀನೀಯರೊಂದಿಗೆ ಇಂದು ಪ್ರಯುಕ್ತ ಮನಸಿನಿಂದ ಸಹಕರಿಸಬೇಕು. ಇಲ್ಲವಾದರೆ ಚೀನವು ಸಂಯುಕ್ತ ರಾಷ್ಟ್ರಗಳ ಮೂಲಿಕೆಯನ್ನು ಹರಿದು ಹೊರಗೆ ಬಂದು ಜಪಾನಿನೊಂದಿಗೆ ಒಪ್ಪಂದವನ್ನು ಮಾಡಿಕೊಂಡು 'ಏಶಿಯಾಟಿಕ್ ರಾಷ್ಟ್ರಗಳ ಸಂಘ'ವನ್ನು ಸ್ಥಾಪಿಸುವುದರಲ್ಲಿ ಆಗ್ರಸ್ಥಾನವನ್ನು ವಹಿಸಬಹುದು. 'ಪು. ಗ.'

(1ನೇ ಪುಟದಿಂದ ಸಾಗಿದ್ದು)

ಷ್ಟು ಕಾರಣ ತರದ್ದಿದೆ ಎಂದು ಅವರಿಗೆ ತಿಳಿಯುವ ಸೌಕರ್ಯಗಳಿಲ್ಲ. ಪತ್ರಿಕೆಗಳ ಮತ್ತು ಕೆಲ ಭಾಷಣಕಾರರ ಮೂಲಕ ಅವರು ಸ್ವಲ್ಪವನ್ನು ಮಾತ್ರ ತಿಳಿಕೊಳ್ಳುವರು. ಕಾಂಗ್ರೆಸ್ ಕೆಲಸಗಾರರಿಂದ ಅವರ ಶಿಕ್ಷಣ ಪದ್ಧತಿಯು ಮಾರ್ಪಡಿಸುವಂತಾಗಬೇಕು.

ರಾಜಕೀಯದಿಂದ ಪ್ರತ್ಯೇಕವಿರಬೇಕೆಂಬ ನನ್ನ ಅಭಿಪ್ರಾಯ ಈಗಲೂ ಇದೆ. ಆದರೆ ಸಾರ್ವಜನಿಕ ಕಾರ್ಯಾನುಭಂಗ ಚಳವಳಿಯು ಸಮಯದಲ್ಲಿ ಮಾತ್ರ ಈ ವಿಚಾರ ಬೇರೆ. ಆದರೆ ಬಹುಮಟ್ಟಿಗೆ ಅದರ ಪ್ರಶ್ನೆಯು ಸದ್ಯಕ್ಕೆ ಇಲ್ಲವೆನ್ನಬಹುದು. ಆದರೆ ರಚನಾತ್ಮಕ ಕಾರ್ಯದ ಜಾಗೃತಿಯ ಕುರಿತು ಅವರಿಗೆ ತಕ್ಕ ಶಿಕ್ಷಣ ದೊರೆಯಲೇಬೇಕು. ನಾಗರಿಕರು ದೇಶಪ್ರೇಮಿಗಳಾಗಿರುವಂತೆ ಕಲಿಸುವುದು ಸ್ವತಂತ್ರ ಸರಕಾರದ ಕರ್ತವ್ಯ. ಈಗ ಶಿಕ್ಷಣವು ಪರದೇಶಿ ಭಾಷೆಯಲ್ಲಿ ಕೊಡಲ್ಪಡುತ್ತದೆ. ಅದು ರಾಷ್ಟ್ರೀಯ ಭಾವನೆಗೆ ವಿರೋಧವಾದುದು. ಅದನ್ನು ಸಾಧಿಸಲು ಒಂದು ಕಾರ್ಯಕರ್ತರ ದಳ ತಯಾರಾಗಬೇಕು. ಈ ವಿಚಾರದಲ್ಲಿ ಇದೊಂದು ಹೊಸ ಕಾರ್ಯರಂಗ.